ಕ್ರಮ ಸಂಖ್ಯೆ	ವರ್ಷ	ನೀಡಿರುವ ಸಹಾಯಧನ (ಕೋಟಿ ರೂ. ಗಳಲ್ಲಿ)	
		ಕೆ. ಪಿ. ಟಿ. ಸಿ. ಎಲ್	ಕೆ. ಪಿ. ಸಿ. ಎಲ್
1.	1994-95	208. 10	ರಾಜ್ಯ ಸರ್ಕಾರ
2.	1995-96	409. 10	ಯಾವುದೇ ಸಬ್ಸಿಡಿ
3.	1996-97	679. 99	ನೀಡುತ್ತಿಲ್ಲ
4.	1997-98	539.04	
5.	1998-99	670.00	

ಅಧ್ಯಕ್ಷರು : ನಾವು 12 ಗಂಟೆಗೆ ಪ್ರಶ್ನೋತ್ತರ ವೇಳೆಯನ್ನು ಮುಕ್ತಾಯಗೊಳಿಸುತ್ತೇವೆಂದು ಹೇಳಿದ್ದೇವೆ. ಈಗ ಇನ್ನು ಉಳಿದಿರುವಂತಹ ತಡೆಹಿಡಿಯಲಾದ ಪ್ರಶ್ನೆಗಳನ್ನು ಈ ವಾರದಲ್ಲಿ ಸಮಯ ಸಿಕ್ಕರೆ ತೆಗೆದುಕೊಳ್ಳುತ್ತೇವೆ. ಈಗ ಸಭೆಯನ್ನು ಅರ್ಧಗಂಟೆಯ ಕಾಲ ಮುಂದೂಡಿ ನಂತರ ಸೇರುತ್ತದೆ.

(ಸಭೆಯ ಮತ್ತೆ ಅರ್ಧ ಗಂಟೆಯ ನಂತರ ಸೇರಲು ನಿಶ್ಚಯಿಸಿತು)

4. **<u>ಅಧ್ಯಕ್ಷರ ಅಪ್ಪಣೆ ಮೇರೆಗೆ</u>**

ವಿಷಯ : ಚುನಾವಣಾ ಆಯೋಗವು ಜಿಲ್ಲಾ ಪಂಚಾಯತ್ ತಾಲ್ಲೂಕ್ ಪಂಚಾಯತ್ ಚುನಾವಣೆ ಘೋಷಿಸಿರುವುದರಿಂದ ಸದನವನ್ನು ಮುಂದುವರಿಸದಿರಲು ಒತ್ತಾಯ

ಹಾಗೂ

ಸಭಾತ್ಯಾಗ.

ಸಭೆಯು 4- 10 ಗಂಟೆಗೆ ಪ್ರಾರಂಭವಾಯಿತು.

(ಮಾನ್ಯ ಅಧ್ಯಕ್ಷರು) ಪೀಠವನ್ನು ಅಲಂಕರಿಸಿದ್ದರು

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆಯಿಂದ ಇಲ್ಲಿಯವರೆಗೂ ತಮ್ಮ ಕೊಠಡಿಯಲ್ಲಿ ಮತ್ತು ಬಿ.ಎ.ಸಿ ಮೀಟಿಂಗ್‌ನಲ್ಲಿ ಇವತ್ತು ಬೆಳಿಗ್ಗೆ ನಾವು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದೆವು, ಅಂದರೆ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಚುನಾವಣಾ ಆಯೋಗ ಘೋಷಣೆ ಮಾಡಿರತಕ್ಕಂಥಾದ್ದು, ಮತ್ತು ಈ ಸಂದರ್ಭದಲ್ಲಿ ನಾವು ಈ ಸದನವನ್ನು ಈಗಾಗಲೇ ಫಿಕ್ಸ್ ಮಾಡಿರುವ ರೀತಿಯಲ್ಲಿ 5ನೇ ತಾರೀಖಿನವರೆಗೂ ನಡೆಸಬೇಕೇ ಅಥವಾ ಮುಂದೂಡಬೇಕೇ ಎನ್ನುವ ಬಗ್ಗೆ ಚರ್ಚೆ ನಡೆಯಿತು. ಇವತ್ತು ಬೆಳಿಗ್ಗೆ ಸಹ ನಾವು ಮಾನ್ಯ ಅಧ್ಯಕ್ಷರಲ್ಲಿ ಮತ್ತು ಸರ್ಕಾರದಲ್ಲಿ ವಿನಂತಿ ಮಾಡಿಕೊಂಡಿದ್ದೆವು. ಚುನಾವಣಾ ಆಯೋಗವು ಕ್ಯಾಲೆಂಡರ್ ಆಫ್ ಈವೆಂಟ್ಸ್‌ನ್ನು 29ನೇ ತಾರೀಖು ಘೋಷಣೆ ಮಾಡಿದೆ. ದಿನಾಂಕ 10ರಂದು ಅಧಿಸೂಚನೆಯನ್ನು ಹೊರಡಿಸುವಂತಾದ್ದು, ಈ ಸಂದರ್ಭದಲ್ಲಿ ಚುನಾವಣಾ ನೀತಿ ಸಂಹಿತೆ 29ನೇ ತಾರೀಖಿನಿಂದಲೇ

ಪ್ರಾರಂಭವಾಗುತ್ತದೆ ಎನ್ನತಕ್ಕಂಥಾದ್ದು, ಈ ಸನ್ನಿವೇಶದಲ್ಲಿ ನಾವು ಯಾವ ರೀತಿ ಸದನವನ್ನು ನಡೆಸಿಕೊಂಡು ಹೋಗಬೇಕು ಎನ್ನುವಂತಾದ್ದು, ಇವತ್ತು ಬೆಳಿಗ್ಗೆಯಿಂದ ನಡೆದಂತಹ ಚರ್ಚೆ ಸಂದರ್ಭದಲ್ಲಿ ಈ ಎಲ್ಲಾ ವಿಷಯಗಳು ಬಂದವು. ಪ್ರಾಮುಖ್ಯವಾಗಿ ಇವತ್ತು ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ, ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನಾವು ಹಲವಾರು ಇಲಾಖೆಗಳ ಬಗ್ಗೆ ಚರ್ಚೆಯನ್ನು ಪ್ರಥಮ ಹಂತದಲ್ಲಿಯೇ ಚರ್ಚೆ ಮಾಡುತ್ತಿದ್ದೇವೆ. ಇಲಾಖಾ ಬೇಡಿಕೆಗಳ ಮೇಲೆ ನಾವು ಇನ್ನೂ ಈಗ ಚರ್ಚೆಯನ್ನು ಪ್ರಾರಂಭ ಮಾಡಿದ್ದೇವೆ. ನಾವು 5ನೇ ತಾರೀಖಿನವರೆಗೂ ಚರ್ಚೆ ಮಾಡಿದರೂ ಮೊದಲ ಹಂತದ ಚರ್ಚೆ ಮುಗಿಯುವುದಿಲ್ಲ. ಇನ್ನೂ ಸುಮಾರು 58 ಇಲಾಖಾ ಬೇಡಿಕೆಗಳು ಇವೆ. ಅವುಗಳನ್ನು ಚರ್ಚೆ ಮಾಡಿ ಮುಗಿಸುವುದಕ್ಕೆ ಬಹುಶಃ ಇನ್ನೂ 10- 15 ದಿವಸಗಳ ಕಾಲಾವಕಾಶ ನಮಗೆ ಬೇಕಾಗುತ್ತದೆ ಮತ್ತು ಈ ಒಂದು ಅಧಿವೇಶನದಲ್ಲಿ ಈ ಇಲಾಖಾ ಬೇಡಿಕೆಗಳ ಮೇಲೆ ನಾವು ಚರ್ಚೆ ಮಾಡಬಾರದು, ಅಧಿವೇಶನವನ್ನು ಮುಂದಕ್ಕೆ ಹಾಕಬೇಕು ಎನ್ನುವ ಉದ್ದೇಶ ನಮಗೆ ಇಲ್ಲ. ಇವತ್ತು ಈ ಒಂದು ಪರಿಸ್ಥಿತಿ ಮತ್ತು ಸನ್ನಿವೇಶದಲ್ಲಿ ಮತ್ತು ಚುನಾವಣಾ ಆಯೋಗದ ನೀತಿ ಸಂಹಿತೆ ಇರುವಂತಹ ಸಂದರ್ಭದಲ್ಲಿ ಈ ಒಂದು ನೀತಿ ಸಂಹಿತೆ ಜಾರಿಗೆ ಬಂದ ಮೇಲೂ ನಾವು ಈ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಲು ನಮಗೆ ಕಾನೂನು ರೀತ್ಯಾ ಯಾವುದೇ ಅಡೆತಡೆಇಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಅದರ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಈ ಸದನಕ್ಕೆ ತನ್ನದೇಆದ ಒಂದು ಸ್ಥಾನಮಾನ ಇದೆ. ಅದನ್ನು ಪ್ರಶ್ನೆ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದರೆ ಈ ಒಂದು ನೀತಿ ಸಂಹಿತೆ ಪ್ರಾರಂಭವಾದಂತಹ ಸಂದರ್ಭದಲ್ಲಿ ಇಲ್ಲಿ ನಡೆಯುವಂತಹ ಚರ್ಚೆ ಮತ್ತು ಅದಕ್ಕೆ ಸರ್ಕಾರದಿಂದ ಬರುವ ಉತ್ತರ, ಸರ್ಕಾರದಿಂದ ಬರುವ ಸಮಜಾಯಿಷಿ ಮತ್ತು ಅವರು ಕೊಡುವಂತಹ ಕೆಲವು ಭರವಸೆಗಳು, ಇದರಿಂದ ಚುನಾವಣಾ ಆಯೋಗದ ನೀತಿ ಸಂಹಿತೆ ಏನು ಇದೆ ಅದಕ್ಕೆ ಅಡ್ಡ ಬರಬಹುದು ಎನ್ನುವ ಒಂದು ಹೆದರಿಕೆ ನಮಗೆ ಇದೆ. ಆ ದೃಷ್ಟಿಯಿಂದ ನಾವು ಇವತ್ತು ಈ ಅಧಿವೇಶನವನ್ನು ಮುಂದಕ್ಕೆ ಹಾಕಿ ಎನ್ನುವಂತಹ ಒತ್ತಾಯವನ್ನು ಸರ್ಕಾರಕ್ಕೆ ಮಾಡುತ್ತಿದ್ದೇವೆ. ಇಲ್ಲಿ ಬರುವಂತಹ ಪ್ರಶ್ನೆ 5ನೇ ತಾರೀಖಿನವರೆಗೂ ಚರ್ಚೆಯಾದ ನಂತರ ಅಪ್ರೋಪ್ರಿಯೇಷನ್ ಬಿಲ್ ಮತ್ತು ಹಣಕಾಸಿನ ಮಸೂದೆಗಳನ್ನು ನಾವು ಪಾಸ್ ಮಾಡುವಂಥದ್ದು. ಸರ್ಕಾರದವರು 4 ತಿಂಗಳವರೆಗೂ ಲೇಖಾನುದಾನವನ್ನು ತೆಗೆದುಕೊಂಡಿದ್ದಾರೆ. ಅವರು ಈ ಲೇಖಾನುದಾನವನ್ನು ತೆಗೆದುಕೊಂಡಿರುವುದರಿಂದ ಜುಲೈವರೆಗೂ ಅವರಿಗೆ ಅವಕಾಶ ಇದೆ. ಅವರಿಗೆ ಹಣಕಾಸಿನ ತೊಂದರೆಗಳು ಆಗಲೀ ಅಥವಾ ಇನ್ಯಾವುದೇ ರೀತಿಯ ತೊಂದರೆಗಳು ಸರ್ಕಾರಕ್ಕೆ ಬರಲಾರದು. ಆದ್ದರಿಂದ ಅವರಿಗೆ ಯಾವ ರೀತಿಯ ಹೆದರಿಕೆ ಇಲ್ಲ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದು, 5ನೇ ತಾರೀಖಿನವರೆಗೂ ನಡೆಸುವಂತಹ ಅಧಿವೇಶನವನ್ನು ಮುಂದಕ್ಕೆ ಹಾಕಿ, ತಾವು ಮತ್ತೆ ಅಧಿವೇಶನವನ್ನು ಜೂನ್ 10ನೇ ತಾರೀಖು ಬೇಕಾದರೂ ಮುಂದುವರಿಸಿ, ಅಥವಾ ಜೂನ್ ಕೊನೆಯ ವಾರದಲ್ಲಿ ಇರಬಹುದು, ಅದಕ್ಕೆ ಯಾವುದೇ ರೀತಿಯ ಅಡೆತಡೆ ಇಲ್ಲ. ಹಣಕಾಸಿನ ವಿಷಯದಲ್ಲಿ ಸರ್ಕಾರಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ. ಆದ್ದರಿಂದ ಸರ್ಕಾರ ಇವತ್ತು ಇದನ್ನು ಒಂದು ಪ್ರತಿಷ್ಠೆ ವಿಷಯವನ್ನಾಗಿ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಇವತ್ತು ಸದನವನ್ನು ಮುಂದಕ್ಕೆ ಹಾಕಲಿ. ಜೂನ್‌ನಲ್ಲಿ ಮತ್ತೆ ಮುಂದುವರಿಸಬಹುದು, ಆ ದಿನಾಂಕವನ್ನು ಬೇಕಾದರೆ ಇವತ್ತೇ ಫಿಕ್ಸ್ ಮಾಡಿ. ತಾವು 15 ದಿವಸ ಆಗಲಿ, ಒಂದು ತಿಂಗಳು ಆಗಲಿ ಫಿಕ್ಸ್ ಮಾಡಿ ನಾವು ಚರ್ಚೆಗೆ ಸಿದ್ಧರಿದ್ದೇವೆ. ಸದನದಲ್ಲಿ ಚರ್ಚೆ ಮಾಡೋಣ ಈಗ ಈ ಒಂದು ಸನ್ನಿವೇಶದಲ್ಲಿ ಸದನವನ್ನು ಮುಂದುವರಿಸುವಂತಹ

ಅವಶ್ಯಕತೆ ಇಲ್ಲ ಎನ್ನುವಂತಹ ಮಾತನ್ನು ನಾನು ಹೇಳುತ್ತಿದ್ದೇನೆ. ತಾವು ಸಹಕಾರ ಮಸೂದೆಯನ್ನು ಪಾಸ್ ಮಾಡಿಕೊಂಡಿರಿ ತಾವು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆಯನ್ನು ಪಾಸ್ ಮಾಡಿಕೊಂಡಿರಿ. ಇವತ್ತು ಈ ಸದನ ಯಾವ ರೀತಿ ನಡೆಯುತ್ತಿದೆ ಎನ್ನುವುದು ನಮ್ಮ ಕಣ್ಣು ಮುಂದೆ ಇದೆ. ಇವತ್ತು ತಮಗೆ ಬಹುಮತ ಇದೆ, ಹೆಚ್ಚು ಸಂಖ್ಯಾಬಲ ಇದೆ ಪ್ರತಿಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೂ ನಡೆಯುತ್ತದೆ, ಟೇಕ್ ಇಟ್ ಗ್ರಾ ್ಯಂಟೆಡ್ ಎನ್ನುವಂತಹ ಭಾವನೆಯನ್ನು ದಯವಿಟ್ಟು ಇಟ್ಟುಕೊಳ್ಳುವುದಕ್ಕೆ ಹೋಗಬೇಡಿ. ನಾವು ಇವತ್ತು ಬೆಳಿಗ್ಗೆಯಿಂದ ಸರ್ಕಾರಕ್ಕೆ ಸಾಕಷ್ಟು ಮನವೊಲಿಸಿದ್ದೇವೆ. ಆದ್ದರಿಂದ ದಯವಿಟ್ಟು ಅಧಿವೇಶನವನ್ನು ಮುಂದೂಡಿ. ನಾವು ಇಲ್ಲಿಯವರೆಗೂ ತಮ್ಮ ಜೊತೆ ಸಹಕಾರದಿಂದ ನಡೆದುಕೊಂಡು ಬಂದಿದ್ದೇವೆ. ನಾವು ಇಲ್ಲಿಯವರೆಗೂ ಪ್ರತಿಯೊಂದು ವಿಷಯದಲ್ಲಿಯೂ ಸಹಕಾರವನ್ನು ಕೊಟ್ಟುಕೊಂಡು ಬಂದಿದ್ದೇವೆ. ಈ ಸದನವನ್ನು ಒಳ್ಳೆಯ ರೀತಿಯಲ್ಲಿ ಹೋಗುವಂತಹ ಒಂದು ವಾತಾವರಣವನ್ನು ನಾವೆಲ್ಲ ಸೇರಿ ನಿರ್ಮಾಣ ಮಾಡೋಣ ಎನ್ನುವ ಮಾತನ್ನು ಹೇಳುತ್ತಾ ಈ ಮೂರು ದಿನಗಳ ಕಾಲ ನಾವು ಸದನವನ್ನು ಮುಂದಕ್ಕೆ ಹಾಕಿ ಮತ್ತೆ ಜೂನ್ 10 ಅಥವಾ 12ನೇ ತಾರೀಖು ಅಥವಾ ಮುಂದೆ ಯಾವುದೇ ಒಂದು ದಿನಾಂಕಕ್ಕೆ ಮುಂದೂಡಿದರೆ ಯಾವುದೇ ಒಂದು ತೊಂದರೆ ಆಗುವುದಿಲ್ಲ. ಆಕಾಶ ಕಳಚಿ ಎನೂ ತಲೆಯ ಮೇಲೆ ಬೀಳುವುದಿಲ್ಲ. ನಾನು ಮತ್ತೊಮ್ಮೆ ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈಗ ಸದನವನ್ನು ಮುಂದೂಡಿ ಮತ್ತೆ ಜೂನ್ ತಿಂಗಳಲ್ಲಿ ಯಾವುದಾದರೊಂದು ದಿನಾಂಕವನ್ನು ಫಿಕ್ಸ್ ಮಾಡಲಿ ಎನ್ನುವಂತಹ ಮಾತನ್ನು ಹೇಳಿ ನಾನು ನಾಲ್ಕು ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿಬ್ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೇ, ನಾನು ಈ ಸದನದಲ್ಲಿ 1972ನೇ ಇಸವಿಯಿಂದ ಇದ್ದೇನೆ. ನಾನು ಪ್ರಥಮ ಬಾರಿಗೆ ಈ ಸದನಕ್ಕೆ ಬಂದಾಗ ಇಂದಿನ ಮುಖ್ಯಮಂತ್ರಿಗಳು ಮಂತ್ರಿಗಳಾಗಿ ಅಂದು ಕೆಲಸ ಮಾಡಿದಂತಹ ಅನುಭವವನ್ನು ನಾನು ಅಂದಿನಿಂದ ಬಲ್ಲೆ. ಆಗ ಈ ಸದನದ ಹೆಚ್ಚು ಸಮಯ ಯಾವುದಕ್ಕೆ ವಿನಿಯೋಗವಾಗುತ್ತಿತ್ತು ಅಂದರೆ ಈ ಬಜೆಟ್‌ಗೆ ಸಂಬಧಪಟ್ಟ ಹಾಗೆ ಮತ್ತು ಹಣಕಾಸಿನ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಹೆಚ್ಚು ಸಮಯ ವಿನಿಯೋಗವಾಗುತ್ತಿತ್ತು. ಒಂದೊಂದು ಇಲಾಖೆಯ ಬೇಡಿಕೆಗಳನ್ನು ಈ ಸದನದಲ್ಲಿ 2-3 ದಿವಸಗಳ ಕಾಲ ಚರ್ಚೆ ಮಾಡುತ್ತಿದ್ದೆವು. ಸಾಮಾನ್ಯ ಬಜೆಟ್ ಮೇಲೆ ನಡೆಯುವಂತಹ ಚರ್ಚೆಗಳು ಸುಮಾರು 5 ದಿವಸಗಳ ಕಾಲ ನಡೆಯುತ್ತಿತ್ತು. ಅದೇ ರೀತಿಯಲ್ಲಿ ರಾಜ್ಯಪಾಲರ ಭಾಷಣದ ಮೇಲೂ ಸಹ 5 ದಿವಸ ಚರ್ಚೆ ನಡೆಯುತ್ತಿತ್ತು. ಬೇಡಿಕೆಗಳ ಮೇಲಿನ ಚರ್ಚೆಗಳು ಸುಮಾರು 20-25 ದಿವಸ ಅಥವಾ ಒಂದು ತಿಂಗಳು, ವರ್ಕಿಂಗ್ ಡೇಸ್, ನಡೆಯುತ್ತಿತ್ತು. ದುರಾದೃಷ್ಟವಶಾತ್ ಅದಾದನಂತರ ಈ ಸದನಕ್ಕೆ ಬಹಳ ಮುಖ್ಯವಾಗಿರತಕ್ಕಂಥ ಅಧಿಕಾರ ಹಣಕಾಸಿನ ಮಂಜೂರಾತಿಯನ್ನು ಕೊಡತಕ್ಕಂಥಾದ್ದು. ಮತ್ತೊಂದು ಸದನಕ್ಕೆ ಹಣಕಾಸಿನ ಮಂಜೂರಾತಿಯನ್ನು ಕೊಡುವಂತಹ ಅಧಿಕಾರ ಇಲ್ಲ. ಈ ಸದನಕ್ಕೆ ಇದು ಬಹಳ ಮುಖ್ಯವಾಗಿ ಇರತಕ್ಕಂಥಾದ್ದು. ಇಂತಹ ಅಧಿಕಾರ ಇರತಕ್ಕಂಥ ಈ ಸದನಕ್ಕೆ ದಿನ ಕಳೆದಂತೆ ಆ ಅಧಿಕಾರ ಮೊಟಕು ಆಗುತ್ತಿರುವಂತಾದ್ದನ್ನು ನಾವು ಕಾಣುತ್ತಿದ್ದೇವೆ. ಈಗ ಇರತಕ್ಕಂಥ ಕಾಂಗ್ರೇಸ್ ಪಕ್ಷದ ಅಧಿಕಾರ ಇರಬಹುದು ಅಥವಾ ನಾವು ಇರತಕ್ಕಂಥ ಸಂದರ್ಭದಲ್ಲಿ ಇರಬಹುದು ಈ ವಿಚಾರದಲ್ಲಿ ಈ ಸದನದ ವೇಳೆ, ಮತ್ತು ಇಲ್ಲಿ ನಡೆಯುವ ಚರ್ಚೆ, ಇದೆಲ್ಲ ಮೊಟಕಾಗುತ್ತಿರುವಂತಾದ್ದನ್ನು ನಾವು ನೋಡುತ್ತಿದ್ದೇವೆ. ಈಗ ಅಂಥಾದ್ದೇ ಒಂದು ಸಂದರ್ಭ ಬಂದಿದೆ. ಈಗ ನಾವು ಯಾವ ವಿಚಾರದಲ್ಲಿ ಹೆಚ್ಚಿನ ಸಮಯವನ್ನು

ಕಳೆಯಬೇಕಾಗಿತ್ತೋ ಆ ವಿಚಾರದಲ್ಲಿ ಈ ಸದನದ ಹೆಚ್ಚಿನ ವೇಳೆಯನ್ನು ಕಳೆಯುವುದಕ್ಕೆ ಸಾಧ್ಯ ಆಗುತ್ತಿಲ್ಲ. ಇಲಾಖೆಗಳ ಬೇಡಿಕೆಗಳು ಬಂದಂತಹ ಸಂದರ್ಭದಲ್ಲಿ ಚರ್ಚೆ ಯಾದರೆ ಅದರ ಪ್ರತಿಫಲ ರಾಜ್ಯದ ಜನತೆಗೆ ದೊರೆಯುತ್ತದೆ. ಅಧಿಕಾರದಲ್ಲಿರತಕ್ಕಂಥವರು ಸಹ ಎಚ್ಚರಗೊಳ್ಳುತ್ತಾರೆ. ನಾವು ಸರ್ಕಾರದ ಕೆಲಸಕಾರ್ಯಗಳನ್ನು ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ ಮತ್ತು ಹಣಕಾಸನ್ನು ಜವಾಬ್ದಾರಿಯಿಂದ ಖರ್ಚು ಮಾಡಬೇಕಾಗುತ್ತದೆ ಎನ್ನತಕ್ಕಂಥಾದ್ದು ದಟ್ ಪ್ರಿಕ್ಸ್ ಡೌನ್ ದಿಲೈನ್. ಆ ಪರಿಸ್ಥಿತಿ ಇವತ್ತಿನದಿವಸ ಆಗದೇ ಎನಾಗುತ್ತಿದೆ. ಕೇವಲ ಕೆಲವೇ ದಿನಗಳಲ್ಲಿ ಕೆಲವು ಬೇಡಿಕೆಗಳನ್ನು ಮಂಡಿಸುತ್ತಾರೆ, ಇಲ್ಲಿ ಒಬ್ಬರೋ ಇಬ್ಬರೋ ಮಾತನಾಡುತ್ತಾರೆ, ಅನೇಕ ಬೇಡಿಕೆಗಳ ಬಗ್ಗೆ ಅದೂ ಕೂಡ ಸಾಧ್ಯವಿಲ್ಲ. ಗಿಲಿಟಿನೆಗೆ ಹಾಕುವ ವಿಚಾರ ಕೂಡ ಇವತ್ತು ನಡೆಯುತ್ತಿದೆ. ಈ ವರ್ಷದಲ್ಲಿ ಹೊಸ ಸರ್ಕಾರ ಬಂದಿರತಕ್ಕಂಥಾದ್ದು, ಈ ಸಹಸ್ರಮಾನದಲ್ಲಿ ಪ್ರಥಮ ಬಜೆಟ್‌ನ್ನು ಮಂಡಿಸಿರತಕ್ಕಂಥ ಈ ಸರ್ಕಾರ ಆ ಬಜೆಟ್ ಮೇಲೆ ಆದರೂ ಚರ್ಚೆ ಆಗುವಂತಾದ್ದು ಅತಿ ಅವಶ್ಯಕ. ಏಕೆಂದರೆ ಮುಂದೆ ಬರತಕ್ಕಂಥವರು ಸಹ ಈ ಬಜೆರ್ಟ ಮೇಲೆ ಎಷ್ಟು ದಿನ ಚರ್ಚೆ ಯಾಗಿದೆ ಎನ್ನುವುದನ್ನು ನೋಡುವವರಿದ್ದಾರೆ. ಅಂತಹ ಸಂದರ್ಭ ಕೂಡ ಮುಂದೆ ಒದಗಬಹುದು. ಈ ಸಹಸ್ರಮಾನದ ಚೊಚ್ಚಲ ಬಜೆಟ್‌ನ್ನು ನಾವು ಚರ್ಚೆ ಇಲ್ಲದೆ ಇಲ್ಲಿ ಪಾಸ್ ಮಾಡಬೇಕು, ಅಥವಾ 4-5 ದಿವಸಗಳಲ್ಲಿಯೇ ಈ ಬಜೆಟ್‌ನ್ನು ಪಾಸ್ ಮಾಡಬೇಕು ಅಂದರೆ ಅದು ಸರಿಯಾದ ಕ್ರಮ ಆಗುವುದಿಲ್ಲ ಎನ್ನುವಂತಾದ್ದು ನನ್ನ ಸ್ಪಷ್ಟ ಅಭಿಪ್ರಾಯ. ಆದ್ದರಿಂದ ನಾವು ಈಗಾಗಲೇ ಚರ್ಚೆ ಮಾಡಿದ್ದೇವೆ. ಈ ಬಜೆಟ್ ಮೇಲೆ ನಾವು ಚರ್ಚೆ ಮಾಡುವಂತಹ ಅವಶ್ಯಕತೆ ಇರುವುದರಿಂದ ಈ ಅಧಿವೇಶನವನ್ನು ಮುಂದೂಡಬೇಕಾಗಿದೆ. ಅದಕ್ಕೆ ಸರ್ಕಾರದವರು ಹೇಳುವುದು ಏನೆಂದರೆ ಈಗ ಚುನಾವಣಾ ಆಯೋಗ ಚುನಾವಣೆಗಳನ್ನು ಘೋಷಣೆ ಮಾಡಿದ್ದಾರೆ. ನೀತಿ ಸಂಹಿತೆಗಳನ್ನು ಘೋಷಣೆ ಮಾಡಿದ್ದಾರೆ. ಆ ಘೋಷಣೆ ಈ ಸದನದ ಪರಮಾಧಿಕಾರವನ್ನು ಮೀರತಕ್ಕಂಥ ಘೋಷಣೆ ಆಗುವುದಿಲ್ಲ, ಪರಮಾಧಿಕಾರ ಇರತಕ್ಕಂಥಾದ್ದು ಈ ಸದನಕ್ಕೆ ಎನ್ನುವಂತಹಮಾದ ಸರ್ಕಾರದ್ದು ಆಗಿದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಪರಮಾಧಿಕಾರ ಕೂಡ ನಾವೇ ನಿರ್ಮಿಸಿಕೊಂಡಿರುವ ಆ ನಿಯಮಾವಳಿಗಳಿಗೆ ಒಳಪಟ್ಟಿರಬೇಕಾಗುತ್ತದೆ. ಹಾಗಾದರೆ ನೀತಿ ಸಂಹಿತೆ ಎನ್ನತಕ್ಕಂಥಾದ್ದು ಏಕೆ ಬೇಕಾಗುತ್ತದೆ? ಆದರ ಅವಶ್ಯಕತೆ ಇಲ್ಲ. ಮತ್ತೊಂದು ವಿಷಯವೇನೆಂದರೆ ಯಾವುದೇ ಚುನಾವಣೆ ಆದರೂ ಅದು ಎಲ್ಲಾ ರಾಜಕೀಯ ಪಕ್ಷಗಳಿಗೂ ಕೂಡ ಲೆವೆಲ್ ಪ್ಲೇಯಿಂಗ್ ಗ್ರೌಂಡ್ ಆಗಿರಬೇಕು. ಇವತ್ತು ಸರ್ಕಾರದವರು ಆಡಳಿತ ನಡೆಸುತ್ತಿದ್ದಾರೆ. ಚುನಾವಣೆಗಳು ಘೋಷಣೆಯಾಗಿದೆ. ಅನೇಕ ಪ್ರಶ್ನೆಗಳು ಬರುತ್ತವೆ, ಅವು ನೀತಿ ಸಂಹಿತೆಗೆ ಒಳಪಟ್ಟ ಪ್ರಶ್ನೆಗಳು ಇರುತ್ತವೆ. ಹಣಕಾಸಿಗೆ ಸಂಬಂಧಪಟ್ಟಂತಹ ಪ್ರಶ್ನೆಗಳು ಇರುತ್ತವೆ. ಆ ಪ್ರಶ್ನೆಗಳಿಗೆ ಅವರಿಗೆ ಅನುಕೂಲವಾಗಿರತಕ್ಕಂಥಾದ್ದನ್ನು ಇಲ್ಲಿ ಹೇಳಿ ರಾಜಕೀಯವಾಗಿ ಲಾಭ ಪಡೆಯುವ ಸಾಧ್ಯತೆಗಳು ಇರಬಹುದು. ಆ ಕಾರಣದಿಂದ ಆಡಳಿತ ಪಕ್ಷಕ್ಕೆ ಅವಕಾಶ ನೀಡಿ ನಾವು ಅದಕ್ಕೆ ಸಿಕ್ಕಿಹಾಕಿಕೊಳ್ಳುವ ಪರಿಸ್ಥಿತಿಯಿರುವ ಕಾರಣದಿಂದ, ಈ ಚುನಾವಣೆಗಳು level playing ಗ್ರೌಂಡ್‌ನಲ್ಲಿ ನೆಡಯಬೇಕಾದ ಅವಶ್ಯಕತೆಯಿದೆ. ಆದ್ದರಿಂದ ಈ ಅಡ್ವಾಂಟೇಜ್ ಏನು ಸಿಗುತ್ತದೆ ಅದು ಕೇವಲ ಆಡಳಿತ ಪಕ್ಷಕ್ಕೆ ಸಿಕ್ಕುವುದು ಅದು ಸೂಕ್ತವಾಗುವುದಿಲ್ಲ, ಎಂಬುದು ನಮ್ಮ ಅಭಿಪ್ರಾಯ ಈ ಎಲ್ಲ ಕಾರಣಗಳಿಂದ ಬಜೆಟ್ ಏನಿದೆ ಅದನ್ನು ಚುನಾವಣೆ ಮುಗಿದ ತಕ್ಷಣ ಚರ್ಚೆ ಮಾಡೋಣ. ಅವರ ವಾದವೇನೆಂದರೆ ಬಿಎಸಿಯಲ್ಲಿ ಈ ಅಧಿವೇಶನ 5ನೇ ತಾರೀಖಿನವರೆಗೂ ನಡೆಯಲಿ ಎಂದು ಹಿಂದೆ ತೀರ್ಮಾನ ಮಾಡಿದ್ದೇವೆ, ಅದರ ಪ್ರಕಾರ ನಡೆಯಲಿ ಎಂಬುದು. ಆದರೆ ಈ ಚುನಾವಣೆ ಇಷ್ಟು ಬೇಗ ಬರುತ್ತದೆ,

ವೇಳಾಪಟ್ಟಿಯನ್ನು ಇಷ್ಟು ಬೇಗ ಪ್ರಕಟಿಸುತ್ತಾರೆಂದು ನಾವ್ಯಾರೂ ಎಣಿಸಿರಲಿಲ್ಲ. ಸರ್ಕಾರ ಇದೇ ಸದನದಲ್ಲಿ ಏನು ಹೇಳಿತ್ತು ಎಂದರೆ 6 ಮತ್ತು 12ನೇ ತಾರೀಖು ಚುನಾವಣೆ ನಡೆಯಲು ನಾವು ಶಿಫಾರಸ್ಸು ಮಾಡಿದ್ದೇವೆ ಎಂದು ಅದಕ್ಕೋಸ್ಕರವೇ 5ನೇ ತಾರೀಖಿನವರೆಗೆ ಇಲ್ಲಿ ಚರ್ಚೆ ನಡೆಸೋಣ ಎಂದೆವು. ನಮ್ಮ ಅನಿಸಿಕೆ ಏನಿತ್ತು ಅಂದರೆ 5ನೇ ತಾರೀಖಿನವರಿಗೆ ಎಷ್ಟು ಬೇಡಿಕೆಗಳ ಮೇಲೆ ಚರ್ಚೆ ನಡೆಸಲು ಸಾಧ್ಯವೋ ಅಷ್ಟುಮಾಡಿ ಮತ್ತೆ ಸದನ ಸಲಹಾ ಸಮಿತಿಯಿಲ್ಲಿ ಸೇರಿ ಇನ್ನೂ ಹೆಚ್ಚಿನ ವೇಳೆಯನ್ನು ಬೇಡಿಕೆಗಳ ಮೇಲಿನ ಚರ್ಚೆಗೆ ಪಡೆದುಕೊಳ್ಳುವುದಾಗಿತ್ತು. ಆದರೆ ಇವತ್ತು ಇದೆಲ್ಲ ಮೊಟಕಾಗುತ್ತಿದೆ. ಮುಖ್ಯವಾಗಿ ಹಣಕಾಸಿನ ವಿಚಾರದಲ್ಲಿ ನಾವೇನು ಹೇಳಬೇಕಾಗಿದೆ ಅದನ್ನು ಹೇಳುವ ಅವಶ್ಯಕತೆಯೂ ಇದೆ. ಈ ಕಾರಣದಿಂದ ಈ ಚರ್ಚೆಯನ್ನು ಇಲ್ಲಿಗೇ ಮೊಟಕು ಮಾಡಿ ಇವತ್ತು ಹೇಗಿದೆಯೋ ಹಾಗೇ ಇದನ್ನು ಚುನಾವಣೆ ಮುಗಿದ ನಂತರ ನಾವು ಚರ್ಚೆಗೆ ತೆಗೆದುಕೊಳ್ಳಬೇಕು. ನಮಗಿರುವ ಅಧಿಕಾರದಂತೆ ನಾವು ಹೇಳಲೇಬೇಕಾಗಿರುತ್ತದೆ, ಆ ಸಂದರ್ಭದಲ್ಲಿ ನಾವು ಮೊದಲೇ ಹೇಳಿದಂತೆ ಲೆವೆಲ್ ಪ್ಲೇಯಿಂಗ್ ಗ್ರೌಂಡ್‌ನಲ್ಲಿ ಚುನಾವಣೆಗಳು ಎಲ್ಲ ರಾಜಕೀಯ ಪಕ್ಷಗಳಿಗೆ ಅನ್ವಯವಾಗುವಂತೆ ನಡೆಯಬೇಕೇ ವಿನಾ ಅಡ್ವಾಂಟೇಜಾಗಿರುವ ರೀತಿಯಲ್ಲಿ ಚುನಾವಣೆ ನಡೆಸುವುದು ಸೂಕ್ತವಲ್ಲ, ಈ ನಮ್ಮ ಸಲಹೆಗೆ ದಯವಿಟ್ಟು ಒಪ್ಪಬೇಕು, ಇವತ್ತೇ ಸದನವನ್ನು ಮುಂದೂಡಬೇಕು. ಹಿಂದೆ ಅಸೆಂಬ್ಲಿ ಮತ್ತು ಲೋಕಸಭೆ ಚುನಾವಣೆ ನಡೆದ ಸಂದರ್ಭದಲ್ಲೂ ಅವತ್ತೇ ತೀರ್ಮಾನ ತೆಗೆದುಕೊಂಡು ಅವತ್ತೇ ಸದನವನ್ನು ಮುಂದೂಡಿರುವುದು ಇದೇ ಸದನದಲ್ಲಿ ನಡೆದಿದೆ. ಹೌದು, ನಾವು ಚರ್ಚೆಗೆ ಚಕಾರ ಎತ್ತದೇ ಸದನ ಮುಂದೂಡಿರುವುದು ಇದೆ. ಈ ಎಲ್ಲ ಕಾರಣಗಳಿಂದ ಸರ್ಕಾರ ಇವತ್ತು ಮನಸ್ಸು ಮಾಡಿ ಬೇಡಿಕೆಗಳನ್ನು ಮುಂದೂಡಬೇಕೆಂಬ ಮನವಿಯನ್ನು ಅವರ ಮುಂದಿಟ್ಟು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿಸುತ್ತೇನೆ. ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

+ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಒಂದು ಪ್ರಮುಖ ಅಂಶವನ್ನು ನಾನು ಸದನದಲ್ಲಿ ಉಲ್ಲೇಖ ಮಾಡಲೇಬೇಕಾಗಿದೆ. ಇವತ್ತು ನೈತಿಕತೆ ಆಧಾರದಲ್ಲಿ ಪ್ರಜಾತಂತ್ರ ವ್ಯವಸ್ಥೆ ನಡೆಯುತ್ತಿದೆ. ಆ ನೈತಿಕತೆಗೆ ಸಂಬಂಧಪಟ್ಟಂತೆ ಸದಾಚಾರ ಸಂಹಿತೆಯನ್ನು ಚುನಾವಣಾ ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಚುನಾವಣಾ ಆಯೋಗ ಮಾಡುತ್ತಾ ಇದೆ. ಚುನಾವಣಾ ಆಯೋಗ ಪುಟ-8, ಕಂಡಿಕೆ-7 ರಲ್ಲಿ ಎಷ್ಟು ಕ್ಲಿಯರಾಗಿ ಹೇಳಿದ ಅಂದರೆ ಹಿಂದಿದ್ದುದನ್ನು ತಿದ್ದುಪಡಿ ಮಾಡಿರುವುದನ್ನು ನಾವೆಲ್ಲ ಗಮನಿಸಬೇಕಾದ ಅವಶ್ಯಕತೆ ಇದೆ. ಚುನಾವಣಾ ಪೂರ್ವದಲ್ಲೂ ಸಮಾಲೋಚನೆಗಾಗಿ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೂ ಕರೆಸಿದ್ದರು. ಏನು ಹೇಳಿದ ಅದರಲ್ಲಿ : ಸದಾಚಾರ ಸಂಹಿತೆಯು ಚುನಾವಣಾ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಚುನಾವಣಾ ಪ್ರಕ್ರಿಯೆ ನಡೆಯುವತನಕ ಅದು ಜಾರಿಯಲ್ಲಿರುತ್ತದೆ ಅಂತ ಹಿಂದೆ ಇತ್ತು. ಈಗ ಅದನ್ನು ತಪ್ಪು ಅಂತ ಒಪ್ಪು ಮಾಡುವ ದೃಷ್ಟಿಯಿಂದ ಆಯೋಗ ಸ್ಪಷ್ಟವಾಗಿ ಹೇಳಿದೆ. ಸದಾಚಾರ ಸಂಹಿತೆಯು ಚುನಾವಣಾ ದಿನಾಂಕಗಳನ್ನು ಪ್ರಕಟಿಸಿದ ದಿನಾಂಕದಿಂದ ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೆ ಜಾರಿಯಲ್ಲಿರುತ್ತದೆ. ಈಗಾಗಲೇ ಮೊನ್ನೆ 29ನೇ ತಾರೀಖಿಗೆ ಏನು ಮಾಡಿದ್ದಾರೆ ಅಂದು ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ವೇಳಾಪಟ್ಟಿಯನ್ನೂ ಪ್ರಕಟಿಸಿದೆ. ಈ ಕಾರಣದಿಂದ 29ನೇ ತಾರೀಖಿನಿಂದಲೇ ಸದಾಚಾರ ಸಂಹಿತೆ ಜಾರಿಯಲ್ಲಿರುತ್ತದೆ. ಮತ್ತು ನೈತಿಕವಾಗಿ ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಇದನ್ನು ಮಾಡುವ ಅವಶ್ಯಕತೆ ಇದೆ. ಆದಕಾರಣ ಯಾವುದೆ ವಿಚಾರಗಳನ್ನು ಸದನದಲ್ಲಿ ಚರ್ಚಿಸುವಾಗ ಆಶ್ವಾಸನೆಗಳಿಂದ ನೀತಿ ಸಂಹಿತೆ ಉಲ್ಲಂಘನೆಯಾಗುತ್ತದೆ.

ನಮ್ಮ ನೈತಿಕತೆಯನ್ನು ಕೆಳಗುಮಾಡುತ್ತದೆ ಎಂಬುದು ಒಂದು. ಅಂಶ. ಇನ್ನೊಂದು ಪ್ರಮುಖ ವಿಚಾರವನ್ನು ಈ ಸಮಯದಲ್ಲಿ ನಾನು ತಮ್ಮ ಗಮನಕ್ಕೆ ತರಬೇಕಾಗುತ್ತದೆ : ಪ್ರಾಯಶಃ ಈ ಸದನ ಅತ್ಯಂತ ಗೌರವಾನ್ವಿತವಾದ ಸದನ. ಕಳೆದ 6 ತಿಂಗಳಿಂದ ವಿರೋಧ ಪಕ್ಷಗಳನ್ನು ಹೇಗೆ ನೋಡಿಕೊಳ್ಳಲಾಗಿದೆ ಎಂಬುದನ್ನು ನಾವು ಗಮನಿಸಬೇಕು. ವಿರೋಧಪಕ್ಷದವರಾದ ನಾವು ಅತ್ಯಂತ ಜವಾಬ್ದಾರಿಯುತವಾಗಿ ಎಲ್ಲ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಹಲವಾರು ಬಿಲ್ಲುಗಳನ್ನು ತಂದಾಗ ಅವುಗಳಲ್ಲಿ ತಪ್ಪು ಕಂಡಾಗ ಈ ರೀತಿ ತಿದ್ದುಪಡಿ ಮಾಡಬೇಕು, ಸಾಮಾನ್ಯ ಜನರಿಗೆ ಅವು ಒಪ್ಪಿಗೆಯಾಗುವಂತೆ ಮಾಡಬೇಕೆಂದು ಹೇಳಿದೆವು. ನಮಗೆ ಯಾವುದೇ ಗೌರವ ಸಿಕ್ಕಲಿಲ್ಲ. ಬರೀ ತಿರಸ್ಕಾರ ಸಿಕ್ಕಿದೆ. ಆದರೆ ಅದೇ ಬಿಲ್ಲು ಮೇಲ್ಮನೆಗೆ ಹೋದಾಗ ಅದೇ ಸಲಹೆಗೆ ಪುರಸ್ಕಾರ ಸಿಗುತ್ತದೆ ಇದು ಆಗಬಾರದು. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ, ಮತ್ತು ಇಡೀ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ; ಈ ಸದನದ ಪ್ರತಿಪಕ್ಷವನ್ನು ಅವರು ಗಣನೆಗೆ ತೆಗೆದುಕೊಳ್ಳದೇ ಕೇವಲ ಅವರ ಬಾರಿಯಲ್ಲೇ ಹೋಗುವುದು ಸರಿಯಲ್ಲ. ಇವತ್ತು ನಮ್ಮ ವಿನಂತಿ ಇದೆ; ಬೇಡಿಕೆಗಳ ಬಗ್ಗೆ ಚರ್ಚೆಗಳಾಗಬೇಕು. 4 ತಿಂಗಳಿಗೆ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಲು ನಮ್ಮ ಬಜೆಟ್‌ಗೆ ಒಪ್ಪಿಗೆ ಕೊಟ್ಟಿದ್ದೇವೆ, ಈ ರೀತಿ ಇವತ್ತು ಚುನಾವಣಾ ನೀತಿ ಸಂಹಿತೆಯನ್ನು ಪಾಲಿಸಬೇಕಾಗಿದೆ, ಅದರ ಹಿನ್ನೆಲೆಯಿಂದ ನಾವು ಸದನವನ್ನು ಮುಂದೂಡಬೇಕಾಗಿದೆ. ಈಗಾಗಲೇ ಮಾತುಕತೆಯ ಪ್ರಕಾಶ ಜೂನ್ ಎರಡನೇ ವಾರದಲ್ಲಿ ಮತ್ತೆ ಸದನವನ್ನು ಕರೆದು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬ ವಿನಂತಿಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಮಾಡಿಕೊಳ್ಳಲು ಇಚ್ಛಿಪಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಈ ಸದನವನ್ನು ನಡೆಸುವುದಕ್ಕೆ ಒಂದು ಕಡೆ ನಿಯಮಗಳಿವೆ, ಮತ್ತೊಂದು ಕಡೆ ತಮ್ಮ ಅಧ್ಯಕ್ಷತೆಯಲ್ಲಿ ಸದನ ಸಲಹಾ ಸಮಿತಿಯಲ್ಲಿ ನಮ್ಮ ಸಲಹೆಗಳನ್ನು ಕೊಟ್ಟು ಅದರಂತೆಯೂ ಸಭೆ ನಡೆಸುತ್ತೇವೆ. 5ನೇ ತಾರೀಖಿನವರೆಗೆ ಸದನವನ್ನು ನಡೆಸಬೇಕೆನ್ನುವ ನಿರ್ಣಯ ಆಳುವ ಪಕ್ಷದ್ದಲ್ಲ ಅಥವಾ ಸರ್ಕಾರದ್ದೂ ಅಲ್ಲ. ನಾವು ಮತ್ತು ಪ್ರತಿಪಕ್ಷದ ಮುಖಂಡರು ಕುಳುತೇ ಈ ನಿರ್ಣಯಕ್ಕೆ ಬಂದಿದ್ದೇವೆ. ಆದ್ದರಿಂದ ನಾವು 5ನೇ ತಾರೀಖಿನವರೆಗೆ ಸಭೆ ನಡೆಸಬೇಕು. ಏಕೆ ನಡೆಸಬೇಕು? ಈ ಅಧಿವೇಶನವನ್ನು ಕರೆದದ್ದೇ, ಆಯವ್ಯಯವನ್ನು ಮಂಡನೆ ಮಾಡುವುದು, ಅದರ ಮೇಲೆ ಸುಧೀರ್ಘವಾಗಿ ಚರ್ಚೆಯಾಗಬೇಕು, ಚರ್ಚೆಯ ಫಲಿತಾಂಶಗಳನ್ನು ಸರ್ಕಾರ ಗಮನಿಸಿ ಸೂಕ್ತ ಪರಿಹಾರ ಒದಗಿಸುವ ಪ್ರಯತ್ನ ಮಾಡಬೇಕು ಎಂಬ ದೃಷ್ಟಿಯಿಂದ. ಈ ಎರಡೂ ದೃಷ್ಟಿಯಿಂದ ಈ ಸದನ ಇದುವರೆಗೂ ನಡೆದುಕೊಂಡು ಬಂದ ಹಾಗೆ ಇನ್ನೂ ಮೂರು ದಿವಸಗಳ ಕಾಲ ನಡೆಯಬೇಕಾದದ್ದು ಇದೆ. ಇದರಲ್ಲಿ ಯಾರ ಪ್ರತಿಷ್ಠೆ ಪ್ರಶ್ನೆ ಎಂಬುದು ಇಲ್ಲ. ಈ ಮಧ್ಯೆ ಚುನಾವಣಾ ಆಯೋಗ ಚುನಾವಣಾ ತಾರೀಖಿನ್ನು ಘೋಷಣೆ ಮಾಡಿದ್ದಾರೆ. ಚುನಾವಣಾ ತಾರೀಖು ಘೋಷಣೆಯಾದ ಮೇಲೆ ಪರಿಸ್ಥಿತಿ ಬದಲಾವಣೆಯಾಗಿದೆ, ಆದ್ದರಿಂದ ಚರ್ಚೆ ನಡೆದರೆ ಸರ್ಕಾರ ಕೆಲವು ಆಶ್ವಾಸನೆ ಕೊಡುತ್ತದೆ, ಅವರಿಗೆ ಅನುಕೂಲವಾಗುತ್ತದೆ, ನಮಗೆ ಅನಾನುಕೂಲವಾಗುತ್ತದೆ ಎಂಬ ವಾದವನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಮಾನ್ಯ ಉಪನಾಯಕರು ಜೇಳಿದ ಹಾಗೆ ಚುನಾವಣೆಗಳನ್ನು 6 ಮತ್ತು 12 ರಂದು ನಡೆಸಲು ಘೋಷಣೆ ಮಾಡಬೇಕೆಂದು ಸರ್ಕಾರ ಕೇಳಿತ್ತು. ಆದರೆ 2 ಮತ್ತು 6ನೇ ತಾರೀಖಿಗಳಿಗೇ ಚುನಾವಣಾ ಘೋಷಣೆ ಮಾಡಿದ್ದಾರೆ ಎಂಬುದರಲ್ಲಿ ಸರ್ಕಾರ ಪಾತ್ರವೇನೂ ಇಲ್ಲ. ಅವರು ನಮ್ಮನ್ನು ಕೇಳಿಯೇ ಚುನಾವಣೆ ಮಾಡಬೇಕೂಂತ ಏನೂ ಇಲ್ಲ. ಚುನಾವಣಾ ಆಯೋಗ ತನಗೆ ತಿಳಿದ ಹಾಗೆ

ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ದಿನಾಂಕವನ್ನು ಪ್ರಕಟಿಸಿದೆ, ನೀತಿ ಸಂಹಿತೆಯನ್ನೂ ಘೋಷಣೆ ಮಾಡಿದೆ, ಅವರು ಹೇಳಿದಂತೆ ತಪ್ಪು ಒಪ್ಪುಗಳಲ್ಲಿ ಯಾವುದು ಸರಿ ನೀತಿ ಸಂಹಿತೆಯು 10ನೇ ತಾರೀಖಿನಿಂದ ಬರುತ್ತದೋ 29ನೇ ತಾರೀಖಿನಿಂದ ಬರುತ್ತದೋ ಈ ಜಿಜ್ಞಾಸೆಗೂ ಸಮರ್ಥವಾದ ಉತ್ತರ ಕೊಟ್ಟಿದ್ದಾರೆ. 29ನೇ ತಾರೀಖಿನಿಂದಲೇ ಈ ಸಂಹಿತೆ ಜಾರಿಗೆ ಬರುತ್ತದೆ. ಆದರೆ ಬಹಳ ಮೂಲವಾದ ಸಮಸ್ಯೆ, ಇದುವರೆಗೂ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು 73 ಮತ್ತು 74ನೇ ತಿದ್ದುಪಡಿ ಆಗುವವರೆಗೂ ಸರ್ಕಾರವೇ ನಡೆಸುತ್ತಿತ್ತು. ಆ ನೀತಿ ಸಂಹಿತೆಯನ್ನು ಆಗಲೂ ನಡೆಸುತ್ತಿದ್ದರು. ಆದರೆ ಈ ಚುನಾವಣೆ ನೀತಿ ಸಂಹಿತೆಯಿಂದಾಗಲೀ ಚುನಾವಣೆ ಘೋಷಣೆಯಿಂದಾಗಲೀ ಈ ಸದನದ ಸಾರ್ವಭೌಮತ್ವಕ್ಕೆ ಯಾವ ಕೊರತೆಯೂ ಬರುವುದಿಲ್ಲ. ಈ ಸದನದ ಸಾರ್ವಭೌಮತೆಯನ್ನು ಉಳಿಸಿಕೊಳ್ಳಬೇಕೆಂದು ನಿಮ್ಮದೂ ಚಿಂತನೆ ಇದೆ, ನಮ್ಮದೂ ಚಿಂತನೆ ಇದೆ. ಆದರೆ ಅವರು ಚುನಾವಣೆ ಘೋಷಣೆ ಮಾಡಿದ್ದಾರೆ.; ಆದ್ದರಿಂದ ಸದನದಲ್ಲಿ ನಾವು ಚರ್ಚೆ ಮಾಡಬಾರದು ಅಂದರೆ ಈ ಸದನದ ಅಸ್ತಿತ್ವದ ಉದ್ದೇಶವಾದರೂ ಏನು ಹಾಗಾದರೆ? ಯಾವುದೋ ನಾಲ್ಕು ರಾಜ್ಯಗಳಲ್ಲಿ ಚುನಾವಣೆ ಆಗುತ್ತದೆ ಅಂದರೆ ಸಂಸತ್ ಅಧಿವೇಶನ ನಡೆಯುವುದೇ ಬೇಡ ಅಂತ ಹೇಳಲು ಸಾಧ್ಯವೇ? ಹಾಗೇ ಇಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಯುವ ಕಾಲದಲ್ಲಿ ಸದನ ನಡೆಯುವುದು ಬೇಡ, ಆಯವ್ಯಯದಲ್ಲಿ ನಾವು ಇದೂವರೆಗೂ ಏನು ಮಂಡನೆ ಮಾಡಿದ್ದೇವೆ, ಅದಕ್ಕಿಂತ ಆಚೆಗೆ ಹೋಗಿ.... ಏನೋ ಹೊಸ ಆಯಾಮಗಳನ್ನು, ಹೊಸ ಚರ್ಚೆಯನ್ನು, ಸರ್ಕಾರ ಮಾಡುವುದಿಲ್ಲ. ಈ ದೃಷ್ಟಿಯಿಂದ ನಾವು ಇಲ್ಲಿ ಭರವಸೆ ಕೊಡುವುದು, ಭರವಸೆ ಕೊಡದೇ ಇರುವುದು ನಾವು ಎಲ್ಲಿ ನೀತಿ ಸಂಹಿತೆಯನ್ನು ದಾಟುತ್ತೇವೆ, ಅಂತಹ ಕಡೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಕಡಿವಾಣ ಹಾಕುವುದಕ್ಕೆ ಅವಕಾಶ ಇದೆ. ನಾವು ಈಗ ಈ ಅಧಿವೇಶನ ಸೇರಿದ ಮೇಲೆ ನನಗೆ ಬಂದಿರತಕ್ಕ ಮಾಹಿತಿಯ ಪ್ರಕಾರ ಸುಮಾರು ಎಂಟು ದಿವಸಗಳ ಕಾಲ 19 ಗಂಟೆಗಳಲ್ಲಿ 52 ಜನ ಸದಸ್ಯರು ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಿದ್ದಾರೆ. ಆ ಚರ್ಚೆ ಮುಗಿದಿದೆ. ಅದಕ್ಕೆ ಉತ್ತರವನ್ನು ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಜೊತೆಗೆ ಈ ಆಯವ್ಯಯದ ಮಂಡನೆಯಲ್ಲಿ ನಮ್ಮ ಡಿಮ್ಯಾಂಡ್ಸ್ ಫಾರ್ ಗ್ರ್ಯಾಂಟ್ಸ್ ಮೇಲೆ ಚರ್ಚೆ ಮಾಡತಕ್ಕದ್ದು ಪ್ರಾರಂಭ ಆಗಿ ಆಗಲೇ ಎರಡು ದಿವಸ ಚರ್ಚೆ ಆಗಿದೆ. ಎಂಟು ಡಿಮ್ಯಾಂಡ್ಸ್‌ಗಳ ಮೇಲೆ ಚರ್ಚೆ ಮುಗಿದು ಹೋಗಿದೆ. ಇವತ್ತು ಉತ್ತರವನ್ನು ನಾವು ಹೇಳಬೇಕು. ಸುಮಾರು 18 ಜನ ಸದಸ್ಯರು ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತ ಮಾಡಿದ್ದಾರೆ. ಈ ಹಂತದಲ್ಲಿ ಆ ಚರ್ಚೆ ಮಾಡಿದಂತಹ ಸದಸ್ಯರಿಗೆ ಜವಾಬ್ದಾರಿ ಇರತಕ್ಕ ಸರ್ಕಾರ ಉತ್ತರ ಕೊಡದೇ ಇದ್ದರೆ, ಉತ್ತರವನ್ನು ಕೊಡದೇ ಈ ಸಭೆಯನ್ನು ಮುಂದುವರೆಸಿ ಎನ್ನುವ ವಾದ ಇದೆಯಲ್ಲಾ, ಇದು ಸರಿ ಅಲ್ಲ. ನನ್ನ 30 ವರ್ಷಗಳ ಜೀವನದ ಸಂಸದೀಯ ನಡವಳಿಕೆಯೊಳಗೆ ಇಂತಹ ಪ್ರಸಂಗಗಳು ಬಂದಿಲ್ಲ. ಹಿಂದೆಯೂ ಇಂತಹ ಒಂದು ಪ್ರಸಂಗ ಬಂತು. ಮಾನ್ಯ ಸಿಂಧ್ಯಾ ಅವರು, ಮಾನ್ಯ ಭೈರೇಗೌಡರು 1972ನೇ ಇಸವಿಯಿಂದ ಏನು ಈ ಸದನದ ಸದಸ್ಯರಾಗಿದ್ದೇವೆಂದು ಹೇಳಿದ್ದಾರೆ ಅವರ ಪಕ್ಷವೇ ಹಿಂದೆ ಸರ್ಕಾರ ನಡೆಸಿತು. 1997ನೇ ಇಸವಿಯಲ್ಲಿ ಜುಲೈ ತಿಂಗಳ 12ನೇ ತಾರೀಖು ಇದೇ ರೀತಿಯಾದಂತಹ ಒಂದು ಪರಿಸ್ಥಿತಿ ಇತ್ತು. ಚುನಾವಣೆಗೆ ಇನ್ನೂ ಮೂರು ತಿಂಗಳೂ ಇತ್ತು. ಆ ಕಾಲಕ್ಕೇನೇ ಎಲ್ಲಾ ಡಿಮ್ಯಾಂಡ್ಸ್‌ಗಳನ್ನು ಗಿಲೆಟಿನ್ ಮಾಡಿ ಚರ್ಚೆಯನ್ನು ಸ್ಥಗಿತಗೊಳಿಸಿ, ಆಯವ್ಯಯವನ್ನು ಪಾಸ್ ಮಾಡಲಾಯಿತು, ನೀವೇನು ಈಗ ಹೇಳುತ್ತಿದ್ದೀರಿ, ಮನಿ ಬಿಲ್ ಪಾಸ್ ಮಾಡಬೇಕು, ಅದು ನಮ್ಮ

ಮೊದಲನೇ ಆದ್ಯ ಕರ್ತವ್ಯ ಎನ್ನುವಂತಹದನ್ನು ತಾವೇನು ಈಗ ಪ್ರತಿಪಾದನೆ ಮಾಡಿದ್ದೀರಿ ಅದನ್ನು ಆಧಾರವಾಗಿಟ್ಟುಕೊಂಡು ಆ ಸಾರಿ ಕೂಡ ಅಪ್ರೋಪ್ರಿಯೇಷನ್ ಬಿಲ್ ಅನ್ನು ಇದೇ ಸದನದಲ್ಲಿ ಚರ್ಚೆ ಇಲ್ಲದೇ ಪಾಸ್ ಮಾಡಿದ್ದೀರಿ. ನಮಗೆ ಬಹುಮತ ಇದೆ ಎನ್ನುವಂತಹ ಒಂದು ಗರ್ವ ಆಗಲೀ ಅಥವಾ ಅಲ್ಪಮತದಲ್ಲಿದ್ದಾರೆ ಪ್ರತಿಪಕ್ಷದ ಮುಖಂಡರು, ಆದ್ದರಿಂದ ಚರ್ಚೆಯನ್ನೇ ತಪ್ಪಿಸಬೇಕು ಎನ್ನತಕ್ಕದ್ದಾಗಲೀ ಖಂಡಿತ ಈ ಸರ್ಕಾರದ ಉದ್ದೇಶವಲ್ಲ. ಸರ್ಕಾರದ ಉದ್ದೇಶ, ಏನೆಂಬುದನ್ನು ನಾನು ಆಗಿನಿಂದ ಈ ಸದನದಲ್ಲಿ ಹೇಳಿದ್ದೇನೆ. ಅನೇಕ ಸಾರಿ ನಾವು ಹೇಳಿದ್ದೇವೆ. ಸದನದ ಸಮಯವನ್ನು ಹೆಚ್ಚು ಕಾಲ ಈ ಒಂದು ಚರ್ಚೆಗೆ ಕೇಂದ್ರೀಕರಿಸಿದರೆ, ಹೆಚ್ಚು ಬೆಳಕು ಪ್ರತಿ ಒಂದು ಇಲಾಖೆಯ ಮೇಲೆ ಬಂದು ಕೆಲಸ ಮಾಡುವುದಕ್ಕೆ ಸರ್ಕಾರಕ್ಕೂ ಅನುಕೂಲ. ಆ ದಿಸೆಯಲ್ಲಿ ಸ್ಪಂದನೆ ಮಾಡುವುದಕ್ಕೆ ಆಡಳಿತ ನಡೆಸುವವರಿಗೆ ಅನುಕೂಲ. ಆದ್ದರಿಂದ ಈ ಚರ್ಚೆಯನ್ನು ಮುಂದುವರೆಸೋಣ ಎನ್ನುವಂತಹ ಮಾತನ್ನು ಸಾರ್ವಜನಿಕವಾಗಿ ಈ ಸದನದಲ್ಲಿ ನಾನು ಅನೇಕ ಸಾರಿ ಬೇಡಿಕೆ ಇಟ್ಟಿದ್ದೆ. ಆದರೆ ಅನೇಕ ಕಾರಣಗಳಿಂದ ಚರ್ಚೆಗೆ ಕೇಂದ್ರೀಕೃತವಾಗದೇ ನಾವು ಹೆಚ್ಚಾಗಿ, ಬಹುತೇಕ ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೆಚ್ಚಿಗೆ ಹೇಳಿದರೆ ಅವರು ಕ್ಷಮಿಸುತ್ತಾರೆಂದು ಭಾವನೆ ಮಾಡಿದ್ದೇನೆ. ಒಂದು ಹಂತದಲ್ಲಿ ನಾನು ಹೇಳಿದೆ. ಯಾವುದನ್ನು ನಾವು ಪ್ರತಿ ಇಲಾಖಾವಾರು ಚರ್ಚೆ ಮಾಡತಕ್ಕಂತಹ ವಿಷಯಗಳನ್ನು ಜೀರೋ ಹವರ್ ಮೂಲಕ ಚರ್ಚೆ ಮಾಡುತ್ತಿದ್ದೇವೆ. ಅದೇ ವಿಷಯವನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಚರ್ಚೆ ಮಾಡಿದರೆ ಸಮರ್ಥವಾಗಿ ಉತ್ತರ ಕೊಡಲು ಸಾಧ್ಯವಾಗುತ್ತದೇನೋ ಎನ್ನುವಂತಹ ಮಾತನ್ನು ನಾನು ಈ ಸದನದಲ್ಲಿ ಹೇಳಿದ್ದೇನೆ. ಒಮ್ಮೆಯಲ್ಲ, ಹಲವಾರು ಸಾರಿ ಹೇಳಿದ್ದೇನೆ. ಈಗ ಇರತಕ್ಕ ಪ್ರಶ್ನೆ ಸರ್ಕಾರದ ಪ್ರತಿಷ್ಠೆ ಮೇಲೆ ಅಲ್ಲ. ನಾನು ಈ ಸದನದ ಸಾರ್ವಭೌಮತ್ವವನ್ನು ಪ್ರತಿಪಾದನೆ ಮಾಡುತ್ತಿದ್ದೇನೆ. ನಮ್ಮ ಪ್ರತಿಷ್ಠೆಗೆ ಧಕ್ಕೆ ಬರುತ್ತದೆ ಎನ್ನುವಂತಹ ನಿಲುವ ನಮ್ಮದಲ್ಲ. ಈ ಸದನಕ್ಕೆ ಏನಾದರೂ ಸಾರ್ವಭೌಮತ್ವ ಇದ್ದರೆ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಯ ಚುನಾವಣೆ ನೆಪದಲ್ಲಿ ಈ ಸಾರ್ವಭೌಮತ್ವಕ್ಕೆ ಕುತ್ತಿಗೆ ಹಿಸುಕುವಂತಹ ಕೆಲಸವನ್ನು ಚುನಾವಣಾ ಆಯೋಗ ಮಾಡುವುದಕ್ಕೆ ಬರುವುದಿಲ್ಲ. ಈ ಚುನಾವಣೆ ಮುಗಿದ ತಕ್ಷಣ ನಮ್ಮ ಪುರಸಭೆ ಚುನಾವಣೆ ಬರುತ್ತದೆ, ಆಗಲೂ ಚರ್ಚೆ ಮಾಡಬೇಡಿ. ಈ ಹಿಂದೆ ಪಂಚಾಯತಿ ಚುನಾವಣೆ ಬಂತು, ಆಗಲೂ ಚರ್ಚೆ ಮಾಡಬೇಡಿ, ಅದಾದ ತಕ್ಷಣ ಕಾರ್ಪೊರೇಷನ್ ಎಲೆಕ್ಷನ್ ಬರುತ್ತದೆ, ಆ ಕಾರ್ಪೊರೇಷನ್ ಎಲೆಕ್ಷನ್ಸ್ ಬಂದಾಗಲೂ ಚರ್ಚೆ ಮಾಡಬೇಡಿ ಎಂದು ಹೇಳಿ, ಅನಂತರ ಈ ಎಪಿಎಂಸಿ ಎಲೆಕ್ಷನ್ಸ್ ಬರುತ್ತದೆ. ಆಮೇಲೆ ಸಹಕಾರಿ ಸಂಸ್ಥೆಗಳ ಎಲೆಕ್ಷನ್ಸ್ ಬರುತ್ತದೆ. ಈ ಸಂಸ್ಥೆಗಳು ಚುನಾವಣೆಗಳು ಬಂದಾಗಲೆಲ್ಲಾ ಈ ಸದನದಲ್ಲಿ ಚರ್ಚೆ ಮಾಡಕೂಡದು ಎನ್ನುವಂತಹ ವಾದ ನನಗೆ ಹೊಸದು. 30 ವರ್ಷಗಳ ನನ್ನ ಸಂಸದೀಯ ಜೀವನದಲ್ಲಿ ಇದು ಹೊಸದು, ಆದರೆ ನಾನು ಈ ಹಿಂದೆಯೇ ನಿಮಗೆ ಹೇಳಿದ್ದೇನೆ. ನಾವು ಎಲ್ಲ ಮಸೂದೆಗಳನ್ನು ಪಾಸ್ ಮಾಡಿದ್ದೇವೆ. ಆಗಲೂ ಒಂದು ಮಾತು ಮಾನ್ಯ ಸಿಂಧ್ಯಾರವಗೆ ಹೇಳಿದೆ. ನೀವು ಈ ಸದನದ ಸಾರ್ವಭೌಮತ್ವವನ್ನು ಪ್ರಶ್ನೆಗೆ ಒಡ್ಡಬೇಡಿ. ಮಾನ್ಯ ರಾಜ್ಯಪಾಲರ ಜೊತೆಗೆ ತೆಗೆದುಕೊಂಡು ಹೋಗಬೇಡಿ. ಇಲ್ಲಿಯೇ ಚರ್ಚೆ ಮಾಡೋಣ. ಅದರ ಆಗು ಹೋಗುಗಳನ್ನು ಅಥವಾ ತೊಂದರೆ ಗಳನ್ನು ನಿವಾರಿಸಿಕೊಳ್ಳೋಣ ಎಂದು ಹೇಳಿದೆ; ಆಗ ಅದು ಬಹಳ ಮೆಚ್ಚಿಗೆ ಆಯಿತು, ಮಾನ್ಯ ಸಿಂಧ್ಯಾ ಅವರು ವಿಶೇಷವಾಗಿ ಬೆಲೆ ಏರಿಕೆಯ ಬಗ್ಗೆ ತುಂಬಾ ಸೊಗಸಾಗಿ ಮಾತನಾಡಿದರು. ಆ ಬಗ್ಗೆ ಮಾರ್ಗದರ್ಶನ ಮಾಡಿದರು. ನಮಗೆಲ್ಲ ತುಂಬಾ ಸಂತೋಷವಾಯಿತು. ಆದರೆ ಈ ಸಂತೋಷ ನನಗೆ ಒಂದು

ಫಳಿಗೆಯಲ್ಲಿ ಮಾಯವಾಯಿತು. ಅವರು ನಾನು ವಾಕ್‌ಔಟ್ ಮಾಡುತ್ತೇನೆಂದರು. ನಾನು ತಿಳಿದೆ; ಎನ್‌ಡಿಎಯಿಂದಲೇ ವಾಕ್‌ಔಟ್ ಮಾಡುತ್ತಾರೇನೋ ಎಂದು ತಿಳಿದೆ. ಆದರೆ ಅವರು ವಾಕ್‌ಔಟ್ ಮಾಡಿದ್ದು ಈ ಸದನದಿಂದ ಯಾರು ಬೆಲೆ ಏರಿಕೆಗೆ, ಯಾವ ಕೇಂದ್ರ ಸರ್ಕಾರ ಕಾರಣವಾಯಿತೋ ಆ ಸರ್ಕಾರದಿಂದ ಹೊರ ಹೋಗುತ್ತೇನೆ ಎಂದಿದ್ದರೆ ನಾನು ಭೇಷ್ ಎಂದು ಅವರನ್ನು ಮೆಚ್ಚುತ್ತಿದ್ದೆ. ಆದರೆ ದುರ್ದೈವ ದಿಂದ ಅವರು ಹೊರಗೆ ಹೋಗಿದ್ದು ಈ ವಿಧಾನಸಭೆಯಿಂದ, ಬಿಲ್‌ಗಳ ಬಗ್ಗೆ ನಮ್ಮ ಮಾನ್ಯ ಉಪನಾಯಕರು ಮಾತನಾಡುತ್ತಾ ಹೇಳಿದರು. ಇಲ್ಲಿ ಮಸೂದೆ ಬಗ್ಗೆ ಚರ್ಚೆಗೆ ನಮಗೆ ಅವಕಾಶ ಕೊಡುವುದಿಲ್ಲಎಂದು ಮೇಲ್ಮನೆಯಲ್ಲಿ ಬಿಲ್ ಪಾಸಾಯಿತು. ಅವತ್ತೂ ನಾನು ಅದೇ ಮಾತನ್ನು ಹೇಳಿದ್ದೇನೆ. ಚರ್ಚೆ ಮಾಡಿದರೆ ಪರಿಹಾರ ಸಿಗುತ್ತದೆ. ಚರ್ಚೆ ಮೇಲ್ಮನೆಯಲ್ಲಿ ಪಾಸಾಯಿತು ಎಂದು ಹೇಳಿದ್ದಾರೆ. ಚರ್ಚೆ ಮಾಡಿದರೆ ಅವಕಾಶಗಳು ಸಿಗುತ್ತದೆ. ಚರ್ಚೆಯೇ ಮಾಡದಿದ್ದರೆ?

ಶ್ರೀ ಡಿ.ವಿ.ಸದಾನಂದ ಗೌಡ : ನಾವು ಸಲಹೆ ಕೊಟ್ಟಿದ್ದನ್ನು ಸ್ವೀಕಾರ ಮಾಡಲಿಲ್ಲ. ಈಗ ಕೋ -ಆಪರೇಟಿವ್ ಬಿಲ್‌ನಲ್ಲಿ ಇದೇ ತರಹ ನಾವು ಕೊಟ್ಟಿದ್ದೆವು. ನೀವು ಮೇಲ್ಮನೆಯಲ್ಲಿ ಅದನ್ನು ಸ್ವೀಕಾರ ಮಾಡಿದಿರಿ. ಇಲ್ಲಿ ನಿಮಗೆ ಹಾಗೆ ಮಾಡಲು ಏನಾಗುತ್ತಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : ಪಂಚಾಯತ್ ರಾಜ್ ಮಸೂದೆ ಬಂದ ಅನುಭವದ ಮೇಲೆ ಸ್ವಲ್ಪ ಇಂಪ್ರೂವ್ ಆಯಿತು. ಪಂಚಾಯತ್ ರಾಜ್ ಮಸೂದೆಯೊಳಗೆ ಚರ್ಚೆ ಮಾಡಿ ಮೇಲ್ಮನೆಯಲ್ಲಿ ಕೊಟ್ಟಂತಹ ತಿದ್ದುಪಡಿಯನ್ನು ನೀವೂ ಇಲ್ಲಿ ಶಾಸನಭದ್ಧವಾಗಿ ಕೊಟ್ಟಿದ್ದರೆ ಬಹುಶಃ ಸರ್ಕಾರ ಒಪ್ಪಿಕೊಳ್ಳುತ್ತಿತ್ತು. ಅದಕ್ಕಾಗಿ ನಾನು ಹೇಳಿದೆ. ಈಗ ನೀವು ಹೇಳಿದಿರಿ, ಕೋ-ಆಪರೇಟಿವ್ ಬಿಲ್‌ನ ಬಗ್ಗೆ ಮುಂದೆ ಚರ್ಚೆ ಮಾಡೋಣ. ಎಲ್ಲಾ ಬಿಲ್‌ಗಳನ್ನು ಪಾಸ್ ಮಾಡಿದ್ದೇವೆ. ಎಲ್ಲಾ ಬಿಲ್‌ಗಳನ್ನು ಪಾಸ್ ಮಾಡಬೇಕು ಎಂತಲೇ ಸದನ ಸೇರುವು. These are all the fundamental duties and responsibilities which we have to discharge for the people of the State. ಆ ದೃಷ್ಟಿಯಿಂದ ನಾವು ಎಲ್ಲಾ ವಿಚಾರಗಳನ್ನೂ ಚರ್ಚೆ ಮಾಡಿದ್ದೇವೆ. ಅದರಿಂದ ಈಗ ಚುನಾವಣಾ ಆಯೋಗದ ನೀತಿ ಸಂಹಿತೆಯ ಉಲ್ಲಂಘನೆ ಆಗುತ್ತದೆ ಎನ್ನುವಂತಹ ಭೀತಿ ಏನು ಇದೇ ಅದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸ್ವಲ್ಪವೂ ನಮ್ಮ ಸದನದ ಸಾರ್ವಭೌಮತ್ವಕ್ಕೆ ಧಕ್ಕೆ ಆಗದ ಹಾಗೆ ನೀತಿ ಸಂಹಿತೆಗೆ ಅಡ್ಡಿ ಬರದ ಹಾಗೆ ಏನು ಹೊರಗಡೆಯಿಂದ ಚುನಾವಣೆ ಮಾಡಬೇಕು ಎನ್ನತಕ್ಕ ಆಲೋಚನೆ ಆಗಲೇ ಘೋಷಣೆ ಆಗಿದೆ, ಅದನ್ನೂ ನಡೆಸಿಕೊಂಡು ಈ ಸದನಕ್ಕೆ ಅಗೌರವ ಬರದ ಹಾಗೆ ಇದರ ಸಾರ್ವಭೌಮತ್ವವನ್ನು ಉಳಿಸಿಕೊಂಡು ಈ ಸಭೆಯನ್ನು ಮುಂದುವರಿಸುವುದಕ್ಕೆ ನಾನು ಮಾನ್ಯ ವಿರೋಧ ಪಕ್ಷದ ಹಿರಿಯ ನಾಯಕರು ಮತ್ತು ಅನುಭವಿ ಮುಖಂಡರುಗಳು ಏನು ಇದ್ದಾರೆ. ಅವರಲ್ಲಿ ನಾನು ಮನವಿ ಮಾಡುತ್ತೇನೆ. ಇನ್ನೂ ಮೂರು ದಿವಸಗಳ ಅವಕಾಶ ಇದೆ. ಇನ್ನು ಮೂರು ದಿವಸಗಳಲ್ಲಿ ಈಗಾಗಲೇ ಚರ್ಚೆ ಮಾಡಿರತಕ್ಕ ವಿಚಾರವನ್ನು ನಾನು ಹೇಳಿದೆ. 8 ಡಿಮ್ಯಾಂಡ್ಸ್‌ಗಳ ಮೇಲೆ ಚರ್ಚೆ ಮುಗಿದಿದೆ. ಹೊಸ ಸರ್ಕಾರ ಬಂದಿದೆ. ಈ ಸಹಸ್ರಮಾನದ ಸರ್ಕಾರಕ್ಕೆ ಬೆಲೆ ಬರಬೇಕು -ಎಂದರೆ ಚರ್ಚೆ ಆದ ಡಿಮ್ಯಾಂಡ್ಸ್‌ಗಳಿಗಾದರೂ ಉತ್ತರ ಕೊಡಬೇಕೋ ಬೇಡವೋ? ಚರ್ಚೆ ಆಗಿರತಕ್ಕದ್ದಕ್ಕೆ ಉತ್ತರ ಕೊಡಬೇಕು. Halfway, the House cannot be adjourned. ಈಗ ಅರ್ಧ ಚರ್ಚೆ ಆದಂತಹ ಸಂದರ್ಭದಲ್ಲಿ ಸದನವನ್ನು ಮುಂದುವರಿಸತಕ್ಕದ್ದು ಸತ್ಸಂಪ್ರದಾಯ ಆಗುವುದಿಲ್ಲ. ಇನ್ನು ತರವೇನು ಹೇಳಿದ್ದೀರಿ? ಜೂನ್ ತಿಂಗಳಲ್ಲಿ

ಸಭೆ ಸೇರೋಣ ಎಂದು ಹೇಳಿದ್ದೀರಿ. ಖಂಡಿತವಾಗಿ ಸೇರೋಣ. ಇವತ್ತೇ ತಾವು ತಾರೀಖಿನ್ನು ನಿಗದಿ ಮಾಡಿ, ಆ ತಾರೀಖಿಗೇ ಸೇರಬೇಕು ಎಂದು ಹೇಳಿ. ಆ ತಾರೀಖಿಗೆ ಮುಂದುವರಿಸೋಣ. ಆದರೆ ಅದಕ್ಕೆ ಪೂರ್ವಭಾವಿಯಾಗಿ ಹಿಂದೆ ಈ ಸದನದಲ್ಲಿ ನಡೆದಿರತಕ್ಕ ನಡವಳಿಕೆಗಳ ಆಧಾರದ ಮೇಲೆ ಯಾವ ಡಿಮ್ಯಾಂಡ್ಸ್ ಇದ್ದಾವೆ. ಅವುಗಳ ಮೇಲೆ ಡಿಸ್ಕಷನ್ ಮುಗಿಸಿ, ನಮ್ಮ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಮಾಡಿ ಆಮೇಲೆ ನಮ್ಮ ಮುಂದಿನ ಕಾರ್ಯಕ್ರಮಗಳನ್ನು ಮಾಡಲು ಸರ್ಕಾರದ ಮುಂದೆ ಯಾವುದೇ ಅಡ್ಡಿ ಇಲ್ಲ. ತಾವೇನು ಆದೇಶ ಕೊಡುತ್ತೀರೋ ಹಾಗೆನಡೆದುಕೊಳ್ಳಲು ಸಿದ್ದವಾಗಿದ್ದೇವೆ. ಪುನಃ ಪುನಃ ಪ್ರಸ್ತಾಪ ಮಾಡುತ್ತೇನೆ. ಈ ಒಂದು ಸಲಹೆ ಏನು ಇದೆ? ಅವರು ಕೊಟ್ಟಂತಹ ಸಲಹೆ, ಬೆಳಿಗ್ಗೆಯಿಂದ ಏನು ಚರ್ಚೆ ಮಾಡಿದೆವು ಅಂದರೆ ಸದನ ಮುಂದುವರಿಸಬೇಕು. ಸರ್ಕಾರ ತಯಾರಾಗಿದೆ. ಯಾವ ತಾರೀಖಿಗೆ ನೀವು ನಿಗದಿ ಮಾಡುತ್ತೀರೋ ಆ ತಾರೀಖಿಗೆ ತಯಾರಾಗಿದ್ದೇವೆ. ಆದರೆ ಈ ಧನ ವಿನಿಯೋಗ ವಿಧೇಯಕವನ್ನು ಈ ಸದನದಲ್ಲಿ ಮಂಡಿಸಿ ಅದಕ್ಕೆ ಒಪ್ಪಿಗೆ ಕೊಡಬೇಕು. ಆ ಒಪ್ಪಿಗೆ ಕೊಡದೇ ಇದ್ದರೆ ಯಾವ ಡೈರೆಕ್ಷನ್ಸ್ ಇಟ್ಟುಕೊಂಡು ಸರ್ಕಾರ ಹೊರಟಿದೆಯೋ ಆ ನಿರ್ದೇಶನದಲ್ಲಿ, ಮಾರ್ಗದರ್ಶನದಲ್ಲಿ ಹೋಗಲು ಕಷ್ಟ ಆಗುತ್ತದೆ. ನಾಲ್ಕು ತಿಂಗಳಿಗೆ (ಅಪ್ರೋಪ್ರಿಯೇಷನ್ ಬಿಲ್‌ಗೆ) ವೋಟ್ ಆನ್ ಅಕೌಂಟ್ ಕೊಟ್ಟು ಬಿಟ್ಟಿದ್ದೇವೆ - ಎಂದು ಹೇಳಿದರೆ ಖರ್ಚು ಮಾಡಲಿಕ್ಕೆ ಅಷ್ಟು ಸಾಕು. ಆದರೆ ನಿಜವಾದ ಅರ್ಥದಲ್ಲಿ ಸರ್ಕಾರದ ಉದ್ದೇಶ ಈಡೇರಬೇಕು ಎಂದಾದರೆ ಅದು ಸಾಕಾಗುವುದಿಲ್ಲ. ಆದ್ದರಿಂದ ಪೂರ್ಣ ಬಜೆಟ್ ಪಾಸ್ ಆಗಬೇಕು. ನಾವು ಹಿಂದೆ ಅನೇಕ ಸಾರಿ ಚರ್ಚೆ ಮಾಡಿದ್ದೇವೆ. ಒಮ್ಮೆ ಬಜೆಟ್ ಮಂಡನೆ ಆಯಿತು. ಅದಕ್ಕಾಗಿಯೇ ಅಧಿವೇಶನವನ್ನು ಕರೆದೆವು. ಆ ಕಾರಣವಾಗಿ ಮುಂದೆ ಹೋಗತಕ್ಕದ್ದು, ಕಾರಣ ಇಲ್ಲದೇ ಮುಂದೆ ಹೋಗತಕ್ಕದ್ದು ಈ ಸದನದ ಸಾರ್ವಭೌಮತೆಗೆ ಧಕ್ಕೆ ಆಗುತ್ತದೆ ಎನ್ನುವುದು ನನ್ನ ಅಚಲವಾದಂತಹ ವಿಶ್ವಾಸ ಮತ್ತು ನಂಬಿಕೆ. ನಿಮ್ಮದೂ ಅದೇ ವಿಶ್ವಾಸ ಮತ್ತು ನಂಬಿಕೆ ಆದ್ದರಿಂದ ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ತಮಗೆ ನಾನು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಭೈರೇಗೌಡರು ಹೇಳಿದ್ದಾರೆ. ಅದನ್ನೇ ರಿಪೀಟ್ ಮಾಡಬೇಡಿ ಮಾನ್ಯ ಸೋಮ್‌ಶೇಖರ್ ಅವರೇ; ದಯವಿಟ್ಟು ಬೇಡ, ಅವರು ಹೇಳಿದ್ದಾರೆ.

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಚಂದ್ರೇಗೌಡರು ಈಗ ಎಲ್ಲಾ ಪಕ್ಷಗಳ ಜೊತೆ ಮಾತನಾಡಿದ್ದಾರೆ.

ಅಧ್ಯಕ್ಷರು: 12 ಗಂಟೆಯಿಂದ 4.30 ಗಂಟೆಯವರೆಗೆ ಏನು ಕೇಳಿದ್ದೇನೋ ಅದನ್ನೇ ಮತ್ತೆ ಕೇಳುತ್ತಿದ್ದೇನೆ. ನಾಲ್ಕೂವರೆ ತಾಸು ಅದೇ ಕೇಳುತ್ತಿದ್ದೇನೆ.

ಶ್ರೀ ಎಸ್.ಸುರೇಶ್ ಕುಮಾರ್ : ಬೆಳಿಗ್ಗೆಯಿಂದ ಹೇಳದೇ ಇರುವುದನ್ನು ಹೇಳಬಹುದಲ್ಲ.

ಅಧ್ಯಕ್ಷರು : ಎಲ್ಲಾ ನಿಮ್ಮ ನಾಯಕರು ಮಾತನಾಡಿದ್ದಾರೆ.

(ಗೊಂದಲ)

4.40ಪಿ.ಎಂ.

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಸದನವನ್ನು ಇನ್ನು ಹೆಚ್ಚು ದಿವಸ ನಡೆಸಿ ಎಂದು ಹೇಳುವುದು ಸರ್ಕಾರ ಇಲ್ಲ, ಇಲ್ಲ ಎಂದು ಹೇಳುವುದು ಸಾಮಾನ್ಯ. ಆದರೆ ಇಲ್ಲಿ ಅದಕ್ಕೆ ವಿರುದ್ಧವಾಗಿದೆ. ಇದು ಒಂದು ರೀತಿ ವಿಪರ್ಯಾಸವಾಗಿದೆ. ಈ ಸಮಯದಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈ ಕಡೆ ಇರಬೇಕಾಗಿತ್ತು ಎಂಬುದು ನನ್ನ ಆಸೆ. ಅವರು ಈ ಕಡೆ ಇದ್ದಿದ್ದರೆ ಅವರ ನಿಲುವು ಏನು ಇರುತ್ತಿತ್ತು ಎಂಬುದು ಅವರೊಂದಿಗಿನ ಐದು ವರ್ಷಗಳ ಸಹವಾಸದಿಂದ ಗೊತ್ತಾಗಿದೆ. ತಾವು ಸಾರ್ವಭೌಮತ್ವದ ಬಗ್ಗೆ ಹೇಳಿದ್ದೀರಿ. ಅದನ್ನು ಒಪ್ಪಿಕೊಳ್ಳುತ್ತೇವೆ. ಈ ಪರಿಸ್ಥಿತಿಗೆ ಬರಲು ಕಾರಣಕರ್ತರು ಯಾರು? ತಾವು ಸದನವನ್ನೇ ಜನವರಿ ಕೊನೆಯವಾರ ಇಲ್ಲವೇ ಫೆಬ್ರವರಿ ಮೊದಲ ವಾರದಲ್ಲಿ ಕರೆದಿದ್ದರೆ ಈ ಸಮಸ್ಯೆ ಬರುತ್ತಿರಲಿಲ್ಲ. ಮಾರ್ಚ್ 31ನೇ ತಾರೀಖು ನಾವು ಓಟ್ ಆನ್ ಅಕೌಂಟ್ ಮಾಡಿಕೊಟ್ಟಿದ್ದೇವೆ. ಹಾಗಿದ್ದರೂ ಅಪ್ರೋಪ್ರಿಯೇಷನ್ ಬಿಲ್ಲು ಪಾಸ್ ಆಗಲೇ ಬೇಕು ಎಂಬ ತರಾತುರಿ ಏನು?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾಲ್ಕು ತಿಂಗಳ ಕಾಲ ಹಣವನ್ನು ಖರ್ಚು ಮಾಡುವುದಕ್ಕೆ ಸದನದ ಒಪ್ಪಿಗೆ ಇದೆ. ಆದರೆ ಸರ್ಕಾರದ ನೀತಿಗೆ ಅನುಗುಣವಾಗಿ ಹಾಕಿಕೊಂಡಿರುವ ಕಾರ್ಯಕ್ರಮವೇನಿದೆ ನಾವು ಆ ಡೈರೆಕ್ಷನ್‌ನಲ್ಲಿ ನಡೆಸಿಕೊಂಡು ಹೋಗಲು ಆಗುವುದಿಲ್ಲ. ಏಕೆಂದರೆ ಟೋಟಲ್ ಅಲೋಕೇಷನ್ ಏನು? ಯಾವುದೋ ವಿಶೇಷವಾದ ಕಾರ್ಯಕ್ರಮವನ್ನು ಸರ್ಕಾರ ಏನು ಹಾಕಿಕೊಂಡಿದೆ ಆ ಕಾರ್ಯಕ್ರಮದ ಅನುಷ್ಠಾನವನ್ನು ಜಾರಿಗೆ ಕೊಡಲು ಒಟ್ಟಾರೆ ಬಜೆಟ್‌ನ್ನು ತಾವು ಪಾಸ್ ಮಾಡಿಕೊಟ್ಟರೆ ಅಲ್ಲಿ ಕೆಳಗಡೆ ಕೆಲಸ ಮಾಡತಕ್ಕವರಿಗೆ ಸಹಾಯಕವಾಗುತ್ತದೆ, ಪೂರಕವಾಗುತ್ತದೆ. ಪ್ರೇರಕವಾಗುತ್ತದೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರಕ್ಕೆ ಎರಡೇ ಎರಡು ಪ್ರಶ್ನೆಗಳನ್ನು ಹಾಕುತ್ತೇನೆ. ಹಣವನ್ನು ಖರ್ಚು ಮಾಡಲು ಅನುಮತಿ ನೀಡಿರುವುದಾಗಿ ಹೇಳಿದ್ದಿರಿ. ಮೇ 5 ರವರೆಗೆ ಅಧಿವೇಶನ ನಡೆಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದ ಮೇಲೆ, ಚುನಾವಣೆಯ ಬಗ್ಗೆ ಮೊದಲೇ ಜ್ಞಾನ ಇರಲಿಲ್ಲವೆ? ಒಟ್ಟಾರೆ 58 ಇಲಾಖೆಗಳು ಇವೆ. ಇದುವರೆಗೆ 8 ಇಲಾಖೆಗಳ ಬಗ್ಗೆ ಮಾತ್ರ ಚರ್ಚೆಯಾಗಿದೆ. ಇಂದು ನಾವು ಮೇ 2ನೇ ದಿನಾಂಕದಲ್ಲಿದ್ದೇವೆ. ಮುಖ್ಯಮಂತ್ರಿಗಳ ಉತ್ತರ ಆದ ಮೇಲೆ ಎಷ್ಟು ಬೇಡಿಕಗಳ ಮೇಲೆ ಚರ್ಚೆ ಮಾಡುತ್ತೀರಿ? ಎಷ್ಟು ಬೇಡಿಕೆಗಳ ಬಗ್ಗೆ ಸಂಪೂರ್ಣವಾಗಿ ಸದಸ್ಯರುಗಳು ಭಾಗವಹಿಸಲು ಸಾಧ್ಯತೆ ಇದೆ? ಇವತ್ತು ತಾವು ಏನು ಮಾಡಬೇಕೆಂದಿದ್ದೀರೊ 5ನೇ ತಾರೀಖು ಸಹ ಅದನ್ನೇ ಮಾಡುವುದು. ಅಂದು ಸಹ ತಾವು ಗಿಲೊಟಿನ್‌ಗೇ ಹಾಕುತ್ತೀರಿ. ಬೆಳಿಗ್ಗೆ ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ಕೇಳಿದಂತೆ ಒಂದು ತಿದ್ದುಪಡಿಯ ಮೂಲಕ ಕೋಡ್ ಆಫ್ ಕಾಂಡಕ್ಟ್ ಪ್ರಶ್ನೆ. ಮತ್ತೊಂದು ಕ್ವೊಶ್ಚನ್ ಆಫ್ ಎಥಿಕ್ಸ್. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರು ಬೇರೆ ಮೂಡ್‌ನಲ್ಲಿ ಇದ್ದರು. ಬಹಳ ಕೋಪವು ಸಹ ಬರುತ್ತಿತ್ತು. ಅದು ಏಕೋ ಗೊತ್ತಾಗಲಿಲ್ಲ. ಸಾಮಾನ್ಯವಾಗಿ ಮುಖ್ಯಮಂತ್ರಿಯವರಿಗೆ ಶೋಭಿಸುವಂಥ ರೀತಿಯಲ್ಲಿ ಇರಲಿಲ್ಲ. ಎಷ್ಟು ಕೋಪ ಬರುತ್ತಿತ್ತು ಅವರಿಗೆ ಎಂದರೆ, ಯಾವುದೋ ಒಂದು ಘಳಿಗೆಯಲ್ಲಿ He was in a different mood he stated questioning the election commission also. ಈ ಸದನದಿಂದ ಆ ಒಂದು ಸಂದೇಶ

ಹೋಗಬೇಕೇ ಎಂಬ ಪ್ರಶ್ನೆ ಬರುತ್ತದೆ. ನಾವು ಇವತ್ತು ಸಭೆಯಲ್ಲಿ ಬೇಡಿಕೆಗಳ ಬಗ್ಗೆ ಮಾತನಾಡುತ್ತ ನಾಳೆ ಯಾವುದೋ ಕಾಲಿಂಗ್ ಅಟ್ಲೆನ್‌ಷನ್ ಅಥವಾ ಶೂನ್ಯವೇಳೆಯಲ್ಲಿ ಏನೋ ಕೇಳುತ್ತೇವೆ, ಅದಕ್ಕೆ ಸರ್ಕಾರ ಉತ್ತರವನ್ನು ಕೊಡಲೇ ಬೇಕು. ಸರ್ಕಾರ ತನ್ನ ಸ್ವ್ಯಾಂಡ್‌ನ್ನು ತಿಳಿಸಲೇಬೇಕು. ನಾವೇನೂ ಲಕ್ಷ್ಮಣ ರೇಖೆಯನ್ನು ಹಾಕಿಕೊಳ್ಳಲು ಆಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ನಾನು ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ, ಇಲ್ಲಿ ಯಾವುದೇ ಅನಾಹುತ ಸಂಭವಿಸುತ್ತಿಲ್ಲ, ಆದ್ದರಿಂದ ಸಭೆಯ ಸದಸ್ಯರುಗಳೆಲ್ಲರ ಭಾವನೆಯನ್ನು ಅರ್ಥ ಮಾಡಿಕೊಂಡು ಸಭೆಯನ್ನು ಮುಂದಕ್ಕೆ ಹಾಕಿ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯ ಚುನಾವಣೆ ಮುಗಿದ ತಕ್ಷಣ ಸಭೆ ಸೇರೋಣ. ಜುಲೈ 31ನೇ ತಾರೀಖಿನವರೆಗೆ ಕಾಯುವುದೇ ಬೇಡ. ಬೇಡಿಕೆಗಳ ಮೇಲೆ ಸಂಪೂರ್ಣವಾಗಿ ಚರ್ಚೆಯಾಗಲಿ. ಓಟ್ ಆನ್ ಅಕೌಂಟ್‌ನ ಅವಧಿಯೇನಿದೆ ಅದರ ಒಳಗಾಗಿಯೇ ಸಂಪೂರ್ಣವಾಗಿ ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆಯಾಗಲಿ. ನಿಮಗೆ ಏಕೆ ಇಷ್ಟು ಅವಸರ?

ಶ್ರೀ ಡಿ.ಬಿ. ಚಂದ್ರೇಗೌಡ : ಅದು ಅವಸರವಲ್ಲ. 5ನೇ ತಾರೀಖಿನವರೆಗೆ ಸಭೆ ಕರೆದಿದ್ದೀರಿ. ಆ ರೀತಿ ಕರೆಯುವಾಗ ಚುನಾವಣೆಯ ಬಗ್ಗೆ ಗೊತ್ತಿರಲಿಲ್ಲವೇ ಎಂದು ತಾವು ಕೇಳಿದ್ದೀರಿ. ಈ ಸಭೆಯನ್ನು ಕರೆದಿದ್ದು ಆಯವ್ಯಯದ ಬಗ್ಗೆ ಚರ್ಚೆ ಮಾಡಲು ಎಂಬ ಅಂಶವನ್ನು ತಾವು ಪ್ರಧಾನವಾಗಿ ಗಮನದಲ್ಲಿ ಇಟ್ಟುಕೊಳ್ಳಬೇಕು. ಉಳಿದ ಬಗ್ಗೆ ಚರ್ಚೆ ಮಾಡಬಾರದು ಎಂದು ಅಲ್ಲ. 5ನೇ ತಾರೀಖಿನವರೆಗೆ ಸಭೆ ನಡೆಸಬೇಕೆಂದು ಆದ ತೀರ್ಮಾನ ಸರ್ಕಾರದ ಏಕಪಕ್ಷೀಯವಾದ ತೀರ್ಮಾನವಲ್ಲ. ನಾವು ನೀವೆಲ್ಲಾ ಒಟ್ಟಿಗೆ ಕುಳಿತು ಮಾಡಿದ ತೀರ್ಮಾನ ಅದು ಈ ತೀರ್ಮಾನಕ್ಕೆ ಏಕಪಕ್ಷೀಯವಾಗಿ ನೀವು ಸರ್ಕಾರವನ್ನೇಕೆ ದೂಷಿಸುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ : ಚುನಾವಣೆ ಇಲ್ಲದಿದ್ದರ ಸಭೆಯನ್ನು ಮುಂದೆ ಹಾಕಿ ಎಂದು ನಾವು ಹೇಳುತ್ತಿರಲಿಲ್ಲ. ಬೇಡಿಕೆಯ ಮೇಲೆ ಚರ್ಚೆಯಾಗಲಿ ಎಂದು ಹಾಗೆ ಹೇಳುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಒಂದು ವಿಚಾರವನ್ನು ತಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. 5ನೇ ತಾರೀಖಿನ ಒಳಗೆ ಎಲ್ಲಾ ಬೇಡಿಕೆಗಳ ಬಗ್ಗೆ ಚರ್ಚ ಮುಗಿಸಿ, ಆಯವ್ಯಯದ ಮೇಲೆ ಚರ್ಚೆ ಮುಗಿಯಿತು ಎಂದು ಧನವಿನಿಯೋಗ ಮಸೂದೆಯನ್ನು ಸದನದಲ್ಲಿ ಪಾಸ್ ಮಾಡಬೇಕು ಎಂಬ ಸದಿಚ್ಛೆಯಿಂದ ನಾವು ನೀವು ಕುಳಿತು ಮಾಡಿದ ತೀರ್ಮಾನ ಇದು. ಆ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ ಎಂದು ಹೇಳುತ್ತೇವೆ. ನೀವು ಏಕೆ ಹೆದರುತ್ತೀರಿ?

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಎಲ್ಲಾ ಶಾಸಕರು ಇಂದು ಏನು ಚುನಾವಣೆ ಪ್ರಕಟವಾಗಿದೆ ಅದಕ್ಕಾಗಿ ಅವರವರ ಕ್ಷೇತ್ರಕ್ಕೆ ಹೋಗುತ್ತಾರೆ. ಇದು ಪವಿತ್ರವಾದ ಸದನ, ಎಲ್ಲಾ ಬೇಡಿಕೆಗಳನ್ನು ಇಟ್ಟುಕೊಂಡು ಎರಡು ಮೂರು ದಿನದಲ್ಲಿ ಮುಗಿಸುವುದೆಂದರೆ ಹೇಗೆ? ಆದ್ದರಿಂದ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಚುನಾವಣೆಯಾಗುವವರೆಗೆ ಸಭೆಯನ್ನು ಮುಂದೂಡುವುದು ಸೂಕ್ತವೆಂದು ತಮ್ಮಲ್ಲಿ, ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

+ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ತಮ್ಮ ಸಮ್ಮುಖದಲ್ಲಿ ಸರ್ಕಾರದ ಮನವೊಲಿಸುವ ಎಲ್ಲಾ ಪ್ರಯತ್ನವನ್ನು ನಾವು ಮಾಡಿದ್ದೇವೆ. ಆದರೆ ಸರ್ಕಾರ ಇದರ ಬಗ್ಗೆ ಪ್ರತಿಷ್ಠೆಯ ನಿಲುವನ್ನು ತೆಗೆದುಕೊಳ್ಳುತ್ತಿದೆ ಎಂಬುದು ದುರ್ದೈವದ ಸಂಗತಿ. ಚುನಾವಣೆ ಆಯೋಗ ಒಂದು ಕಡೆ,

ಈ ಸದನ ಒಂದು ಕಡೆ ಇದೆ. ಒಂದು ರೀತಿಯಲ್ಲಿ ಎರಡೂ ಸಂಸ್ಥೆಗಳಲ್ಲಿ ಅದು ಹೆಚ್ಚೋ ಇದು ಹೆಚ್ಚೋ ಎಂಬ ರೀತಿಯಲ್ಲಿ ಅರ್ಥ ಬರುವಂತೆ ಚರ್ಚೆ ನಡೆಯುತ್ತಿದೆ. ಇದು ದುರ್ದೈವದ ಸಂಗತಿ. ಮಾನ್ಯ ಚಂದ್ರೇಗೌಡರು ಹೇಳಿದಂತೆ ಸದನದ ಸಾರ್ವಭೌಮತ್ವದ ಬಗ್ಗೆ ಯಾರು ಸಹ ಪ್ರಶ್ನೆ ಮಾಡುತ್ತಿಲ್ಲ. ಚುನಾವಣಾ ಆಯೋಗದ ಸ್ವಾತಂತ್ರ್ಯತೆಯ ಬಗ್ಗೆ ನಾವು ಪ್ರಶ್ನೆ ಮಾಡುವುದು ಸರಿಯಲ್ಲ. ತಾವೇನು ಹೇಳಿದ್ದೀರಿ ಅದರ ಎರಡು ಮೂರು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನಿಮ್ಮ ಸರ್ಕಾರವಿದ್ದಾಗ ಮೂರು ತಿಂಗಳು ಮೊದಲೇ ಎಲ್ಲವನ್ನು ಪಾಸ್ ಮಾಡಿಸಿಕೊಂಡಿರಿ ಇವತ್ತು ಏಕೆ ಆಗಬಾರದು ಎಂದು ಹೇಳಿದ್ದೀರಿ. ಅವತ್ತಿನ ಪರಿಸ್ಥಿತಿಯಲ್ಲಿ ಮತ್ತೆ ನಾಲ್ಕೈದು ತಿಂಗಳಿನಲ್ಲಿ ಸಭೆಯನ್ನು ಕರೆದುಪಾಸ್ ಮಾಡಲು ಅವಕಾಶ ಇರಲಿಲ್ಲ. ನಮ್ಮ ಅಧಿಕಾರದ ಅವಧಿ ಮುಗಿಯುತ್ತಿತ್ತು. ಆದ್ದರಿಂದ ಪಾನ್ ಮಾಡಲು ಅವಕಾಶ ಇರಲಿಲ್ಲ. ನಮ್ಮ ಅಧಿಕಾರದ ಅವಧಿ ಮುಗಿಯುತ್ತಿತ್ತು. ಆದ್ದರಿಂದ ಪಾನ್ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಅಂದು ಇತ್ತು. ಇವತ್ತು ಏನು ತಮ್ಮ ಅಪ್ರೋಪ್ರಿಯೇಷನ್ ಬಿಲ್ಲು ಇದೆ, ಅದನ್ನು ಮುಂದಿನ ತಿಂಗಳ ಸಭೆ ಕರೆದು ಪಾಸ್ ಮಾಡಿಸಿಕೊಂಡರೆ ಆಕಾಶವೇನೂ ಕಳಚಿಕೊಂಡು ಕೆಳಕ್ಕೆ ಬೀಳುವುದಿಲ್ಲ. ಸರ್ಕಾರವನ್ನು ನಡೆಸಲು ತಮಗೆ ಯಾವುದೇ ತೊಂದರೆಗಳು ಇಲ್ಲ. ನಾಲ್ಕು ತಿಂಗಳವರೆಗೆ ಓಟ್-ಅನ್-ಅಕೌಂಟ್‌ನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಜುಲೈವರೆಗೆ ತಮಗೆ ಸಮಯ ಇದೆ. ಆದ್ದರಿಂದ ಅದಕ್ಕೂ ಇದಕ್ಕೂ ಸಂಬಂಧ ಕಲ್ಪಿಸುವುದು ಸರಿಯಲ್ಲ. ಎಲ್ಲಾ ಚುನಾವಣೆಗಳು ಬರುತ್ತದೆ, ಎಪಿಎಂಸಿ ಚುನಾವಣೆ ಬರುತ್ತದೆ ಎಂದು ತಾವು ಹೇಳಿದ್ದೀರಿ. ಎ.ಪಿ.ಎಂ.ಸಿ. ಮತ್ತು ಸಹಕಾರಿ ಸಂಘಗಳ ಚುನಾವಣೆಯನ್ನು ಚುನಾವಣಾ ಆಯೋಗದವರು ಮಾಡುವುದಿಲ್ಲ. ಆದರೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಚುನಾವಣೆಯನ್ನು ಚುನಾವಣ ಆಯೋಗದವರು ಮಾಡುತ್ತಾರೆ. ಅದು ಸ್ವಾಯುತ್ತತೆ ಹೊಂದಿರುವ ಸಂಸ್ಥೆ. ಆದ್ದರಿಂದ ಈ ಚುನಾವಣೆಗಳಿಗೂ ಆ ಚುನಾವಣೆಗಳಿಗೂ ಸಂಬಂಧ ತರುವುದು ಸಮಂಜಸವಲ್ಲ. ಕೆಲವು ಸದಸ್ಯರುಗಳು ಚರ್ಚೆ ಮಾಡಿದ್ದಾರೆ, ಅದಕ್ಕೆ ಸರ್ಕಾರದಿಂದ ಉತ್ತರವನ್ನು ಕೊಡಬೇಕಾಗುತ್ತದೆ ಎಂದು ಮಾನ್ಯ ಚಂದ್ರೇಗೌಡರು ಹೇಳಿದರು. ನಾವು ಉತ್ತರವನ್ನು ಕೊಡಬೇಡಿ ಎಂದು ಹೇಳುತ್ತಿಲ್ಲ. ಇನ್ನು ಸಮರ್ಪಕವಾಗಿ ಚರ್ಚೆ ಮಡೆಯಬೇಕಾದರೆ ತಾವು ಅದೇ ಉತ್ತರವನ್ನು ಮುಂದೆ ಜೂನ್ ತಿಂಗಳಿನಲ್ಲಿ ಸಭೆ ಕರೆದಾಗ ಕೊಡಿ. ಸಹಸ್ರಮಾನದ ಬಜೆಟ್ ಎಂದು ತಾವು ಹೇಳುತ್ತೀರಿ. ಆದ್ದರಿಂದ ಸಹಸ್ರಮಾನದ ಬಜೆಟ್‌ನ ಬಗ್ಗೆ ಸಂಪೂರ್ಣವಾದ, ಅರ್ಥಪೂರ್ಣವಾದ ಚರ್ಚೆ ಆಗಲೇ ಬೇಕಾಗುತ್ತದೆ. ಇನ್ನು ಅನೇಕ ಸದಸ್ಯರು ಚರ್ಚೆ ಮಾಡಲೇ ಬೇಕಾಗುತ್ತದೆ. ಆ ರೀತಿ ಚರ್ಚೆ ಮಾಡಿ ಮುಂದಿನ ಜೂನ್‌ನಲ್ಲಿ ಸಭೆ ಕರೆದಾಗ ತಾವು ಉತ್ತರವನ್ನು ಕೊಡಬಹುದು ಎಂದು ನಮ್ಮ ಅನಿಸಿಕೆ. ನಾವು ಏನೂ ಭರವಸೆ ಕೊಡುವುದಿಲ್ಲ, ಸುಮ್ಮನೆ ಚರ್ಚೆ ನಡೆಯಲಿ ಎಂದರೆ ಹೇಗೆ? ಸದನದಲ್ಲಿ ಏನು ಮಾತನಾಡುತ್ತೇವೆ ಅದಕ್ಕೆ ಮಹತ್ವ ಇದೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಇಲ್ಲಿ ಏನೇ ಮಾತನಾಡಿದರೂ ಅದಕ್ಕೆ ಹೆಚ್ಚು ಪ್ರಚಾರ ಸಿಗುತ್ತದೆ, ಮಹತ್ವವು ಇರುತ್ತದೆ. ನೀವು ಏನೇ ಭರವಸೆ ಕೊಡಿ, ಘೋಷಣೆ ಮಾಡಿ ಅದಕ್ಕೆ ಬಹಳ ಮಹತ್ವ ಇದ್ದೇ ಇರುತ್ತದೆ. ಅದನ್ನು ತಪ್ಪಿಸಿಕೊಳ್ಳಲು ಆಗುವುದಿಲ್ಲ. ಮದುವೆ ಮಾತ್ರ ಮಾಡಿಕೊಳ್ಳುತ್ತೇವೆ ಸಂಸಾರ ಮಾತ್ರ ಮಾಡುವುದಿಲ್ಲವೆಂದರೆ ಹೇಗೆ ಆಗುತ್ತದೆ? ಆದ್ದರಿಂದ ಇದರ ಬಗ್ಗೆ ದಯವಿಟ್ಟು ಪ್ರಿಸ್ಟೀಜಿಯಸ್ ಆಗಿ ತೆಗೆದುಕೊಳ್ಳಬೇಡಿ. ಚುನಾವಣೆಯನ್ನು ಬಹಳ ಮುಕ್ತವಾಗಿ ನಡೆಸುವ ಜವಾಬ್ದಾರಿ ಚುನಾವಣಾ ಆಯೋಗದವರಿಗೆ ಇದೆ. ಆಡಳಿತವನ್ನು ಕೊಡುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ನಾವು ಅವರ ಬಗ್ಗೆ ಪ್ರಶ್ನೆ ಮಾಡಬಾರದು ಮತ್ತು ನಮ್ಮ

ಸಾರ್ವಭೌಮತ್ವದ ಬಗ್ಗೆ ಸಹ ಯಾರು ಪ್ರಶ್ನೆ ಮಾಡಬಾರದು. ಅವರು ಮುಕ್ತವಾಗಿ ಚುನಾವಣೆ ನಡೆಸಲು ನಾವು ಸಹಕಾರ ಕೊಡಬೇಕಾಗಿದೆ. ಶಾಸನ ರಚನೆ ಮಾಡಿ, ಆ ಸಂಸ್ಥೆಯನ್ನು ರಚನೆ ಮಾಡಿ, ಅವರು ಮುಕ್ತವಾಗಿ ಚುನಾವಣೆ ಮಾಡಲು ಅವಕಾಶವನ್ನು ಸರ್ಕಾರವಾಗಲೀ, ವಿರೋಧ ಪಕ್ಷದವರಾಗಲಿ, ಕೊಡದಿದ್ದರೆ ಅದರ ಅರ್ಥ ಏನು? We have to give a free hand to conduct elections in a fair manner. ಆ ದೃಷ್ಟಿಯಿಂದ ನಾವು ಹೇಳುತ್ತಿರುವುದು. ಸಭೆಯನ್ನು ಮುಂದೂಡಿದರೆ ಆಕಾಶವೇನು ಬಿದ್ದು ಹೋಗುವುದಿಲ್ಲ. ದಯವಿಟ್ಟು ತಾವು ಇದನ್ನು ಪ್ರಿಸ್ಟೀಜಿಯಸ್ ಇಷ್ಯೂ ಆಗಿ ತೆಗೆದುಕೊಳ್ಳಬೇಡಿ. ತಮ್ಮ ನಿಲುವಿನಲ್ಲಿ ಬದಲಾವಣೆ ಮಾಡಿ ಸಭೆಯನ್ನು ಸ್ವಲ್ಪ ಮುಂದಕ್ಕೆ ಹಾಕಿ. ಅದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇವರು ಆಕಾಶ ತಲೆ ಮೇಲೆ ಬೀಳುವುದಿಲ್ಲ, ಸಭೆಯನ್ನು ಮುಂದಕ್ಕೆ ಹಾಕಿ ಎಂದು ಹೇಳಿದ್ದಾರೆ. ನಾವು ಚುನಾವಣೆಯಲ್ಲಿ ಜನರಿಗೆ ಇಂತಿಂಥ ಕಾರ್ಯ ಕ್ರಮವನ್ನು ಮಾಡುವುದಾಗಿ ಮಾತು ಕೊಟ್ಟಿದ್ದೇವೆ. ಅದಕ್ಕೆ ಪೂರಕವಾದ ಸಿದ್ದತೆಯನ್ನು ಆಯವ್ಯಯದ ಮೂಲಕ ಮಾಡಿಕೊಂಡಿದ್ದೇವೆ. ನಾವು ಕೊಟ್ಟ ಮಾತನ್ನು ನಂಬಿ ಜನರು ನಮಗೆ ಮತವನ್ನು ಕೊಟ್ಟು ಇಷ್ಟು ಸಂಖ್ಯೆಯಲ್ಲಿ ಆರಿಸಿ ಕಳಿಸಿದ್ದಾರೆ. ಅವರು ಹೇಳಿದಂತೆ ಹಿರಿಯರೆಲ್ಲ ಒಪ್ಪಿ ಮಾಡಿದ ಮದುವೆ ಇದು, ಆದರೆ ಗಂಡ ಹೆಂಡತಿ ಜಗಳ ಮಾಡಿಕೊಂಡರೆ ನಾವು ಏನು ಮಾಡಲು ಆಗುತ್ತದೆ? ಆ ರೀತಿಯಾಗಿದೆ ನಮ್ಮ ಪರಿಸ್ಥಿತಿ. ಎಲ್ಲ ಹಿರಿಯರು ಸೇರಿ ಒಪ್ಪಿ ನಮ್ಮನ್ನು ಅಧಿಕಾರದಲ್ಲಿ ಕೂರಿಸಿದ್ದಾರೆ, ಅವರನ್ನು ವಿರೋಧ ಪಕ್ಷದಲ್ಲಿ ಕೂರಿಸಿದ್ದಾರೆ. ಈಗ ನಾವು ಅವರು ಜಗಳ ಮಾಡಿಕೊಂಡು ಸದನವನ್ನು ಮುಂದಕ್ಕೆ ಹಾಕಲು ಆಗುತ್ತದೆಯೇ? ಇದು ಅಸಾಧ್ಯವಾದ ಮಾತು. ಆದ್ದರಿಂದ ನಾನು ಹಿರಿಯ ಸದಸ್ಯರಲ್ಲಿ ಮತ್ತೆ ಮತ್ತೆ ಮನವಿ ಮಾಡುತ್ತೇನೆ, ಸಭೆ ನಡೆಸೋಣ, ನಾವು ನೀವು ಸೇರಿ ಮಾಡಿರುವ ತೀರ್ಮಾನ, ಅದಕ್ಕೆ ಬದ್ಧರಾಗಿ ಮೂರು ದಿವಸಗಳಲ್ಲಿ ಸಭೆಯನ್ನು ಮುಗಿಸೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ಸಾಕಷ್ಟು ಚರ್ಚೆ ಮಾಡಿದರೂ ಸರ್ಕಾರ ತನ್ನ ಹಠವನ್ನು ಬಿಡುತ್ತಿಲ್ಲ. ಇವತ್ತು ಅಪ್ರೋಪ್ರಿಯೇಷನ್ ಬಿಲ್ಲಿನ ಬಗ್ಗೆ ಹೇಳಿದರು. ಈ ಹಿಂದಿನ ವರ್ಷದಲ್ಲಿ ಏನಾಗಿದೆ ಎಂಬುದನ್ನು ನಾವು ನೋಡಿದ್ದೇವೆ. ಆದರೆ ಅಲ್ಲಿ ಜುಲೈನಲ್ಲಿ ಚರ್ಚೆಯಾಗಿ ಆ ಬಜೆಟ್ ಅಪ್ರೂವಲ್ ಆಗಿರುವುದು ಸಹ ಆಗಿದೆ. ಆದರೆ ಈಗ ನಾಲ್ಕು ತಿಂಗಳವರೆಗೆ ಅನುಮತಿಯನ್ನು ಪಡೆದಿದ್ದ ಮೇಲೆ ಸರ್ಕಾರದ ದಿನನಿತ್ಯದ ಕಾರ್ಯಚಟುವಟಿಕೆಗೆ ಹಣಕಾಸಿನ ಯಾವುದೇ ತೊಂದರೆ ಯಾಗುವುದಿಲ್ಲ. ಅವರ ಯಾವುದೇ ಘೋಷಣೆಗಳು ಇರಬಹುದು, ಕಾರ್ಯಕ್ರಮಗಳು ಇರಬಹುದು, ಆದರೆ ಹಣವನ್ನು ಬಿಡುಗಡೆ ಮಾಡಲು ಯಾವುದೇ ತೊಂದರೆ ಇಲ್ಲ. ಜುಲೈ ಕೊನೆಯವರೆಗೆ ಯಾವುದೇ ತೊಂದರೆ ಇಲ್ಲ. ಜುಲೈ ಮುಗಿಯುತ್ತಿದೆ. ಆದ್ದರಿಂದ ಅಪ್ರೋಪ್ರಿಯೇಷನ್ ಬಿಲ್ಲಿನ ಅನುಮತಿ ಕೊಡಿ ಎಂದರೆ ಬೇರೆ ಮಾತು. ಜುಲೈವರೆಗೆ ಅವಕಾಶ ಇರುವುದರಿಂದ ಸಭೆಯನ್ನು ಮುಂದೂಡಿದರೆ ಆಕಾಶ ಬೀಳುವುದಿಲ್ಲವೆಂದು ನಾವು ಹೇಳುತ್ತಿದ್ದೇವೆ. ಅಷ್ಟಾದರೂ ಸರ್ಕಾರ ಅರ್ಥ ಮಾಡಿಕೊಳ್ಳುತ್ತಿಲ್ಲ. ಹಿಂದೆ ಸಹಕಾರಿ ಬಿಲ್ಲು ಇರಬಹುದು, ಪಂಚಾಯತಿ ರಾಜ್ ತಿದ್ದುಪಡಿ ಬಿಲ್ಲು ಇರಬರುದು ಸರ್ಕಾರ ತನ್ನ ನೀತಿಯಿಂದ ನಡೆದುಕೊಂಡು ಬಂದಿದೆ. ಈ ನೀತಿ ಸಂಹಿತೆ ಪ್ರಾರಂಭವಾಗಿರುವ ಸಂದರ್ಭದಲ್ಲಿ ಭರವಸೆಯನ್ನು ಕೊಡುತ್ತೇವೆ, ಆದರೂ ಏನು ಆಗುವುದಿಲ್ಲ, ಆ ರೀತಿ ಲಕ್ಷ್ಮಣ ರೇಖೆ ಹಾಕೋಣ ವೆಂದರೆ ಯಾವ ರೀತಿಯಲ್ಲಿ ಸಾಧ್ಯವಾಗುತ್ತದೆ? ಸದನವನ್ನು ನಡೆಸಬೇಕಾದರೆ ಏನಾದರೂ ಸೂಕ್ತತೆ ಬೇಕಲ್ಲವೇ?

ಚುನಾವಣೆ ಘೋಷಣೆಯಾಗದಿದ್ದರೆ 5ನೇ ತಾರೀಖಿಲ್ಲ ಇನ್ನು ಹತ್ತು ದಿವಸ ಹೆಚ್ಚಾಗಿ ಅಧಿವೇಶನ ನಡೆಸಿ ಎಂದು ಹೇಳುತ್ತಿದ್ದೆವು. ಚುನಾವಣೆ ಘೋಷಣೆಯಾಗಿರುವುದರಿಂದಾಗಿ ಈ ಮಾತನ್ನು ಹೇಳುತ್ತಿದ್ದೇವೆ. ಆದ್ದರಿಂದ ಈ ವಿಶೇಷ ಸಂದರ್ಭದಲ್ಲಿ ಸಭೆಯನ್ನು ಮುಂದೆ ಹಾಕಿ ಜೂನ್ ಹತ್ತನೆ ತಾರೀಖಿನಿಂದ ಮತ್ತೆ ಸಭೆಯನ್ನು ಮುಂದುವರೆಸಿ ಎಂದು ಕೇಳುತ್ತಿದ್ದೇವೆ, ಇವತ್ತು ಯಾವ ಸ್ಟೇಟಸ್‌ಕೋ ಇದೆ ಅದನ್ನೇ ಮುಂದುವರೆಸಿ ಎಂದು ಹೇಳುತ್ತಿದ್ದರೂ ಸಹ ಸರ್ಕಾರ ಲಕ್ಷ್ಯ ಕೊಡುತ್ತಿಲ್ಲ. ಇವತ್ತು ವಿರೋಧ ಪಕ್ಷದವರ ಯಾವುದೇ ಮಾತಿಗೂ ಗೌರವವನ್ನು ಕೊಡುತ್ತಿಲ್ಲ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯು ಇಡೀ ರಾಜ್ಯಾದ್ಯಂತ ನಡೆಯುತ್ತದೆ. ಎಲ್ಲೋ ಒಂದು ನಗರ ಪ್ರದೇಶದಲ್ಲಿ ನಡೆಯುವಂಥದಲ್ಲ. ಆ ಚುನಾವಣಾ ಪ್ರಕ್ರಿಯೆ ನಡೆದಿರುವ ಸಂದರ್ಭದಲ್ಲಿ ಸರ್ಕಾರ ಸರಿಯಾದ ರೆಸ್ಪಾನ್ಸ್ ಕೊಡುತ್ತಿಲ್ಲ. ಇಂಥ ಸನ್ನಿವೇಶದಲ್ಲಿ ಸದನದ ಕಾರ್ಯಕಲಾಪಗಳಲ್ಲಿ ಕಾನೂನು ಇರಬಹುದು, ನೈತಿಕತೆಯ ದೃಷ್ಟಿಯಿಂದ ಇರಬಹುದು, ಸರ್ಕಾರ ಕೊಡುವ ಭರವಸೆಯ ದೃಷ್ಟಿಯಿಂದ ಇರಬಹುದು ನಾವು ಭಾಗವಹಿಸಲು ಆಗುತ್ತಿಲ್ಲ, ಆದ್ದರಿಂದ ಈಸದನದ ಕಾರ್ಯ ಚಟುವಟಿಕೆಯನ್ನು ಬಹಿಷ್ಕಾರ ಮಾಡುತ್ತಿದ್ದೇವೆ, ಸರ್ಕಾರದ ನೀತಿಯನ್ನು ಪ್ರತಿಭಟಿಸಿ, ಸದನದ ಕಾರ್ಯ ಚಟುವಟಿಕೆ ಯನ್ನು ಬಹಿಷ್ಕರಿಸಿ, ಹೊರಗೆ ಹೋಗುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಬಹಿಷ್ಕಾರ ಮಾಡುವುದರಿಂದ ಏನು ಪ್ರಯೋಜನವಾಗುವುದಿಲ್ಲ. ಮೂರು ದಿವಸಗಳ ಕಾಲ ಸಾಕಾಗದಿದ್ದರೆ ಹತ್ತನೆ ತಾರೀಖಿನವರೆಗೆ ಚರ್ಚೆ ಮಾಡಲಿ.

(ಗೊಂದಲ)

ಚುನಾವಣಾ ತಯಾರಿಗೆ ಹೋಗುತ್ತೇವೆ ಎಂದರೆ ಅದು ಬೇರೆ ವಿಚಾರ, ಆದರೆ ಚರ್ಚೆಯೇ ಬೇಡ ಎಂದರೆ ಹೇಗೆ?

ಶ್ರೀ ಆರಗ ಜ್ಞಾನೇಂದ್ರ: ಈ ಸದನದ ಮೂಲಕ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. ಈ ಪಾಪ ಕಾರ್ಯದಲ್ಲಿ ನಾವು ಪಾಲುಗೊಳ್ಳುವುದಿಲ್ಲ. ಸಭೆಯನ್ನು ಬಹಿಷ್ಕರಿಸುತ್ತಿದ್ದೇವೆ. ಭರವಸೆಗಳನ್ನು ಕೊಟ್ಟು ಮತದಾರರನ್ನು ಒಲಿಸಿಕೊಳ್ಳಲು ಈ ಸದನವನ್ನು ದುರ್ಬಳಕೆ ಮಾಡಿ ಕೊಳ್ಳುತ್ತಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ: ಇವರು ಚುನಾವಣಾ ಪ್ರಚಾರವನ್ನು ಈ ವೇದಿಕೆಯಿಂದ ಮಾಡುತ್ತಿದ್ದಾರೆ. ಇದನ್ನು ತೀವ್ರವಾಗಿ ಪ್ರತಿಭಟಿಸಿ ನಾವು ಸಭೆಯನ್ನು ಬಹಿಷ್ಕರಿಸುತ್ತಿದ್ದೇವೆ.

(ಬಿ.ಜೆ.ಪಿ. ಯ ಸದಸ್ಯರುಗಳು ಸಭೆಯಿಂದ ಹೊರ ನಡೆದರು)

+ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಬಹಳ ನೋವಿನಿಂದ ಮಾತನಾಡಬಯಸುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏಕೋ ಗಡುಸು ಮನೋಭಾವವನ್ನು ತಾಳಿದ್ದಾರೆಂದು ನನ್ನ ಅಭಿಪ್ರಾಯ. ಏಕೆಂದರೆ ಕಳೆದ ಆರು ತಿಂಗಳಿನಲ್ಲಿ ನಾವು ಹೇಳಿದ ಅನೇಕ ವಿಚಾರಗಳಿಗೆ ಅವರು ಸ್ಪಂದಿಸಿದ್ದಾರೆ. ಕಂಬಾಲಪಲ್ಲಿ ವಿಚಾರದಲ್ಲಿ. ಸಿ.ಬಿ. ಐ.ಗೆ ವಹಿಸಬೇಕೆಂದು ಹೇಳಿದ್ದೆವು ಅದಕ್ಕೆ ಅವರು ಸ್ಪಂದಿಸಿದ್ದಾರೆ. ವಿರೋಧ ಪಕ್ಷದವರಾದ ನಾವು ಸಹ ಎಲ್ಲಾ ವಿಷಗಳಿಗೂ ವಿರೋಧವನ್ನು ಮಾಡಿಲ್ಲ. ಗಡಿ-ನಾಡಿನ ವಿಚಾರದಲ್ಲಿ ಮಾನ್ಯ ವಾಟಾಳ್ ನಾಗರಾಜ್ ರವರ

ನಾಯಕತ್ವದಲ್ಲಿ ಒಂದು ಆಯೋಗವನ್ನು ರಚನೆ ಮಾಡಿದ್ದೀರಿ. ನಾವು ಅದನ್ನು ಸ್ವಾಗತ ಮಾಡಿದ್ದೇವೆ. ಮಾಹಿತಿ ತಂತ್ರಜ್ಞಾನದ ವಿಚಾರದಲ್ಲಿ ತಾವೇನು ಕರ್ನಾಟಕವನ್ನು ಇಡೀ ದೇಶಕ್ಕೆ ಮಾದರಿಯಾಗಿ ಮಾಡುವ ಕೆಲಸವನ್ನು ಮಾಡಲು ಹೊರಟಿದ್ದೀರಿ, ಅದನ್ನು ಕೂಡ ನಾವು ಸ್ವಾಗತ ಮಾಡಿದ್ದೇವೆ. ಆದರೆ ದುರ್ದೈವದಿಂದ ಏನಾಯಿತು ಎಂದರೆ, ನಾವು ಅಕ್ಟೋಬರ್ 22ರಂದು ಮೊದಲಬಾರಿಗೆ ಅಧಿವೇಶನ ಸೇರಿ ರಾಜ್ಯಪಾಲರ ಭಾಷಣವಾಯಿತು, ಹೊಸದಾಗಿ ಚುನಾವಣೆಯಾದ ಮೇಲೆ ಇಲ್ಲಿ ನಾವು ಪ್ರಮಾಣವಚನವನ್ನು ತೆಗೆದುಕೊಂಡೆವು. ಅನಂತರ ರಾಜ್ಯಪಾಲರ ಭಾಷಣವಾಯಿತು. ಅನಂತರ ಎರಡನೆ ರಾಜ್ಯಪಾಲರ ಭಾಷಣ ಮತ್ತು ಈ ವರ್ಷದ ಪ್ರಥಮ ಭಾಷಣ ಮತ್ತು ಬಜೆಟ್, ಈ ಎರಡಕ್ಕೂ ಸಹ ಇದವರೆಗೂ ಕಾರ್ಯಕಲಾಪಗಳನ್ನು ನಡೆಸಿರುವುದು ಕೇವಲ 26 ದಿವಸಗಳು ಮಾತ್ರ. 2000ನೇ ಇಸವಿಯಲ್ಲಿ 26 ದಿವಸಗಳು ಮಾತ್ರ ಅಧಿವೇಶನವನ್ನು ನಾವು ನಡೆಸಿರುವುದು. ಕೇಂದ್ರ ಸರ್ಕಾರ ಬಡವರು ಉಪಯೋಗಿಸುವ ಆಹಾರಧಾನ್ಯಗಳು ಮತ್ತು ಸೀಮೆ ಎಣ್ಣೆಯ ಬೆಲೆಯನ್ನು ಜಾಸ್ತಿ ಮಾಡಿರುವ ಹಿನ್ನೆಲೆಯಲ್ಲಿ ಎನ್. ಡಿ. ಎ. ಯಿಂದ ಮಾನ್ಯ ಸಿಂಧ್ಯಾರವರು ಹೊರಕ್ಕೆ ಬರುತ್ತಾರೆಂದು ತಿಳಿದಿದ್ದೆ ಎಂದು ಮಾನ್ಯ ಚಂದ್ರೇಗೌಡರು ನನ್ನ ಹೆಸರನ್ನು ತೆಗೆದುಕೊಂಡು ಹೇಳಿದರು. ಎನ್. ಡಿ. ಎ. ಯನ್ನು ನಾವು ಬಿಡಬೇಕಾದರೆ ಈ ದೇಶದಲ್ಲಿ ಪರ್ಯಾಯವಾದ ಪಕ್ಷ, ಸರ್ಕಾರವನ್ನು ರಚನೆ ಮಾಡುವ ಶಕ್ತಿ ಯಾರಿಗಿದೆ? ಇವತ್ತು ಸೈದ್ಧಾಂತಿಕವಾಗಿ ಮಾತನಾಡಿದಾಗ ತಮ್ಮ ಪಕ್ಷಕ್ಕೆ ಆ ತಾಕತ್ತು, ಶಕ್ತಿ ಇದೆಯೇ ಹೇಳಿ. ತಮ್ಮ ಪಕ್ಷಕ್ಕೆ ಆ ರಾಜಕೀಯ ತಾಕತ್ತು, ಶಕ್ತಿ ಇದ್ದಿದ್ದರೆ ಅದರ ಬಗ್ಗೆ ನಾವು ವಿಚಾರ ಮಾಡುತ್ತಿದ್ದೆವು. ಆದರೆ ದುರ್ದೈವದಿಂದ ತಮ್ಮ ಪಕ್ಷ ಇವತ್ತು ಕುಸಿಯುತ್ತಿದೆ. ಇಂಥ ಸನ್ನಿವೇಶನದಲ್ಲಿ ನಾವು ಏನು ಮಾಡಬೇಕು? ಕೇಂದ್ರದಲ್ಲಿ ಯಾವುದಾದರೂ ಸರ್ಕಾರ ಇರಬೇಕಲ್ಲವೆ? ಇವತ್ತು ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಇವತ್ತಿಗೂ ಸಹ ಸ್ಪಷ್ಟವಾಗಿ ಖಂಡಿಸುತ್ತಿದ್ದೇವೆ, ಜನರ ಹತ್ತಿರ ಹೇಳುತ್ತೇವೆ, ಮುಖ್ಯ ಮಂತ್ರಿಗಳಿಗೂ ಸಹ ಅದೇ ಒತ್ತಾಯವನ್ನು ಮಾಡಿದ್ದೇವೆ, ಕೇಂದ್ರ ಸರ್ಕಾರ ಮಾಡಿರುವ ಎಲ್ಲವನ್ನೂ ಸಹ ಜನರ ಮೇಲೆ ಪಾಸ್ ಮಾಡಲು ಹೋಗಬೇಡಿ. ಈಗ ಏನು 450 ರಿಂದ 200 ಕೋಟಿ ರೂಪಾಯಿಗಳನ್ನು ಬಡವರ ಪರವಾಗಿ ಸಬ್ಸಿಡಿಯನ್ನು ಕೊಡುತ್ತಿದ್ದೀರಿ ಅದನ್ನು 200 ಕೋಟಿ ಜಾಸ್ತಿ ಮಾಡಿ ಎಂದು ನಾವು ಕೇಳುತ್ತಿದ್ದೇವೆ. ಆ ರೀತಿ ಹೆಚ್ಚು ಮಾಡಿದ್ದರೆ ತಾವೇನು ಬೀದಿಗೆ ಇಳಿದು ಬೆಲೆ ಏರಿಕೆಯ ಬಗ್ಗೆ ಹೋರಾಟ ಮಾಡುತ್ತಿದ್ದೀರಿ ಅದನ್ನು ಜನರು ಮೆಚ್ಚುತ್ತಿದ್ದರು ಎಂದು ನಾವು ಹೇಳಿದ್ದೇವೆಯೇ ಹೊರತು ಎನ್. ಡಿ. ಎ. ನಿಂದ ವಾಪಸ್ ಬರಬೇಕು ಎಂಬ ಉದ್ದೇಶದಿಂದ ನಾವು ಬಂದಿಲ್ಲ. ಇದು ಪ್ರಥಮ ಬಜೆಟ್, ಬೇಗ ಪಾಸ್ ಆಗಬೇಕು, ಬೇಗ ಕೈ ತೊಳೆದುಕೊಳ್ಳಬೇಕು, ಅನಂತರ ಕೆಲಸವನ್ನು ಮಾಡಬೇಕು ಎಂಬ ಆಸಕ್ತಿ ತಮ್ಮಲ್ಲಿ ಇದೆ. ಅದರ ಬಗ್ಗೆ ಎಲ್ಲೂ ಪ್ರಶ್ನೆ ಮಾಡುತ್ತಿಲ್ಲ. ಆದರೆ ಪ್ರಶ್ನೆ ಏನಿದೆ ಎಂದರೆ 3, 4, 5 ಈ ಮೂರು ದಿವಸಗಳವರೆಗೆ ಚರ್ಚೆ ಇದೆ, ಇದನ್ನು ಮುಂದಕ್ಕೆ ಹಾಕಿ ಜೂನ್ 10 ಇಲ್ಲವೆ 12 ರಂದು ಸಭೆ ಸೇರಿ ಬೇಡಿಕೆವಾರು ಚರ್ಚೆ ಮಾಡೋಣ. ಮಾನ್ಯ ಕೆ. ಹೆಚ್. ರಂಗನಾಥ್‌ರವರು ಸಭೆಯಲ್ಲಿ ಇಲ್ಲ. ಯಾವುದೇ ಸಂದರ್ಭದಲ್ಲಿ ಬೇಡಿಕೆಯ ಬಗೆಗ ಚರ್ಚೆಯಾದ ಸಂದರ್ಭದಲ್ಲಿ ಅಧಿಕಾರಿಗಳು ಆ್ಯಕ್ಟಿವೈಸ್ ಆಗುತ್ತಾರೆಂದು ಅವರು ಹೇಳಿದ್ದರು. ಇವತ್ತು ಅನೇಕ ಹೊಸ ಮಂತ್ರಿಗಳು ಇದ್ದಾರೆ. ಅವರೆಲ್ಲ ಕೆಲಸ ಮಾಡಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಅವರುಗಳು ಉತ್ತರ ಕೊಡಬೇಕಾಗುತ್ತದೆ. ಅದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಆದರಿಂದಾಗಿ ಒಟ್ಟು ಐದನೇ ತಾರೀಖಿನ ಒಳಗಾಗಿ ಇದನ್ನು ಮುಗಿಸಬೇಕೆಂದು ನಾವು ನೀವು ಸೇರಿ ತೀರ್ಮಾನ ತೆಗೆದುಕೊಂಡಿದ್ದು

ನಿಜ. ತಾವು ಕೋ-ಆಪರೇಟಿವ್ ಬಿಲ್ಲನ್ನು ಮತ್ತು ಪಂಚಾಯಿತಿ ರಾಜ್ ಚುನಾವಣೆ ನಡೆಸಲು ಬಿಲ್ಲನ್ನು ಪಾಸ್ ಮಾಡಲು ಯಾವ ತರಾತುರಿಯನ್ನು ತೋರಿಸಿದಿರೊ ಆದೇ ಅವಸರವನ್ನು ಜನವರಿಯಲ್ಲಿ ಅಧಿವೇಶನ ಕರೆಯುವಲ್ಲಿ ತೋರಿಸಬಹುದಾಗಿತ್ತು. ನಾವು ನೀತಿ ಸಂಹಿತೆಯನ್ನು ಪರಿಪಾಲನೆ ಮಾಡುವುದಿಲ್ಲ ಎಂದು ಹೇಳುತ್ತಿದ್ದೀರಿ. ಪರಿಪಾಲನೆ ಮಾಡುತ್ತೇವೆ ನುತ್ತು ಅದಕ್ಕೆ ತಕ್ಕಂತೆ ನಾವು ಉತ್ತರ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ನಿಮ್ಮ ಮೇಲೆ ನಮಗೆ ಭರವಸೆ ಇಲ್ಲ. ಏಕೆಂದರೆ ಇಂದು ಆ ಕಡೆ ಕುಳಿತಿರುವ ಸದಸ್ಯರುಗಳು ಪ್ರಾಮಾಣಿಕವಾಗಿ ಮತ್ತು ಅತ್ಮಸಾಕ್ಷಿಯಾಗಿ ಮಾತನಾಡ ಬೇಕೆಂದರೆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ನಡೆದಿರತಕ್ಕಂಥ ಮೀಸಲಾತಿ ಏನಿದೆ ಇದರ ಬಗ್ಗೆ ಎಷ್ಟು ಬಾರಿ ಗೆಜೆಟ್‌ನಲ್ಲಿ ಬದಲಾವಣೆಯನ್ನು ಇವರು ಮಾಡಿದ್ದಾರೆ ಎಂಬುದನ್ನು ಹೇಳಬೇಕು. ನಿನ್ನೆಯೂ ಕೂಡ ಬದಲಾವಣೆಯನ್ನು ಮಾಡಿದ್ದಾರೆ. ಇನ್ನೂ ಹತ್ತನೇ ತಾರೀಖಿನವರೆಗೆ ಎಷ್ಟು ಬದಲಾವಣೆಗಳು ಆಗುತ್ತವೆಯೋ ನಮಗೆ ಗೊತ್ತಿಲ್ಲ. ಇಂಥ ಒಂದು ಚುನಾವಣೆಯನ್ನು ಮಾಡುವುದೇ ಒಂದು ದೊಡ್ಡ ಸಾಧನೆ ಎಂದು ನೀವು ಏಕೆ ತಿಳಿದುಕೊಂಡಿದ್ದೀರಿ? ಇದರಿಂದ ನಮ ಗಂತೂ ಬಹಳ ನೋವಾಗಿದೆ. ಈ ಘಳಿಗೆಯಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿಸುವುದೇನೆಂದರೆ, ಇದುವರೆಗೂ ಕೂಡ ನಾವು ಸದನ ನಡೆಸುವುದಕ್ಕೆ ಎಲ್ಲಾ ರೀತಿಯಲ್ಲೂ ಸಹಕಾರವನ್ನು ಕೊಟ್ಟಿದ್ದೇವಲ್ಲದೆ ಮುಂದೆಯೂ ಕೂಡ ಸಹಕಾರವನ್ನು ಕೊಡುತ್ತೇವೆಯಾದ್ದರಿಂದ ಈಗ ಸದನವನ್ನು ಮುಂದೂಡಿದರೆ ನಿಮಗೇನು ಆಗುವುದಿಲ್ಲ. ಕಳೆದ ಎಂಟು ಹತ್ತು ವರ್ಷಗಳಿಂದಲೂ ಕೂಡ ಮೂರು ತಿಂಗಳಿಗೋ ಆಥವಾ ನಾಲ್ಕು ತಿಂಗಳಿಗೋ ಲೇಖಾನುದಾನವನ್ನು ಓಟ್ ಆನ್ ಅಕೌಂಟ್ ಮುಖಾಂತರವೇ ತೆಗೆದುಕೊಂಡು ಹಣವನ್ನು ಖರ್ಚು ಮಾಡುತ್ತಿದ್ದೇವೆ ಇನ್ನೂ ಅಡಿಷನಲ್ ಎಕ್ಸ್‌ಪೆನ್ಸ್ ಆದಾಗ ಸಪ್ಲಿಮೆಂಟರಿ ಬಜೆಟ್ ತೆಗೆದುಕೊಂಡು ಅದನ್ನು ಪಾಸ್ ಮಾಡಿಕೊಳ್ಳುತ್ತಾ ಬರಲಾಗಿದೆ. ಇದರಿಂದ ತೊಂದರೆಯೇನೂ ಇಲ್ಲ. ಆದರೆ ಇಂದು ನಾನು ಕೇವಲ ಚುನಾವಣೆ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಈಗಲೂ ಕೂಡ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೊನೆಯದಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಇಂದು ಈ ಸದನವನ್ನು ಮುಂದೂಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಿಂಧ್ಯಾರವರೆ ಒಂದು ನಿಮಿಷ, ನೀವು ಹೋಗುವುದಕ್ಕೆ ಮುಂಚೆ....

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನೋಡಿ, ನಾನು ಹೊರಗೆ ಹೋಗಬೇಕು ಎಂದು ತೀರ್ಮಾನ ಮಾಡಿಲ್ಲ. ಆ ರೀತಿ ಹೋಗಬೇಕೆಂದಿದ್ದರೆ ಬಿ.ಜೆ.ಪಿ.ಯವರು ಹೊರಗೆ ಹೋದಾಗಲೇ ಅವರ ಜೊತೆಯೇ ಹೊರಗೆ ಹೋಗುತ್ತಿದ್ದೆ. ಅಧ್ಯಕ್ಷರೇ, ಇವರ ಪೂರ್ವಾಗ್ರಹ ಪೀಡಿತ ತೀರ್ಮಾನಗಳು ಏನಿವೆ ಎಂಬುದನ್ನು ನೋಡಿ. ಅವರು ಏನು ಹೇಳುತ್ತಾರೆಂದರೆ ಎನ್.ಡಿ.ಎ.ನಿಂದ ವಾಕ್‌ಔಟ್ ಮಾಡಬೇಕೆನ್ನುತ್ತಾರೆ. ಎನ್.ಡಿ.ಎ.ನಿಂದ ನಾವು ವಾಕ್‌ಔಟ್ ಮಾಡಿ ನಾವು ಪರದೇಶಿಗಳಾಗಬೇಕೆ? ಈಗ ಇವರು ಸದನದಿಂದ ವಾಕ್‌ಔಟ್ ಮಾಡಿ ಎನ್ನುತ್ತಾರೆ. ಅಧ್ಯಕ್ಷರೇ, ನಿಮ್ಮ ಮೇಲೆ ಒತ್ತಡ ತಂದು ಓಟ್‌ಹಾಕಿಸಿ ಬಿಡುತ್ತಾರೆ. ನೀವು ಹೌದು ಎನ್ನುವವರು ಹೌದು ಎನ್ನಬೇಕು ಎಂದಾಗ ಅವರೆಲ್ಲರೂ ಹೌದು ಎಂದುಬಿಡುತ್ತಾರೆ. ಏಕೆಂದರೆ ಅವರೆಲ್ಲರೂ ಹೌದಪ್ಪದಿರೇ ಆಗಿರುತ್ತಾರೆ. ಈ ಹೌದಪ್ಪದಿರ ಮಧ್ಯೆ ಇಲ್ಲದಿರಪ್ಪನವರಾದ ನಾವು ಎಲ್ಲಿ ಇರುವುದಕ್ಕಾಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಆ ಅರ್ಥದಲ್ಲಿ ಹೇಳಲಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಾವು ಎತ್ತ ಕಡೆ ಇರಬೇಕು ಎಂದು ಮಾನ್ಯ ಸಿಂಧ್ಯಾರವರಿಗೆ ತೋಚದೇ ಒಂದು ರೀತಿಯಲ್ಲಿ ತ್ರಿಶಂಕು ಸ್ವರ್ಗದಲ್ಲಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಬನ್ನಿಕೋಡ್‌ರವರೆ, ನೀವು ಒಳ್ಳೆಯ ಸ್ವರ್ಗಕ್ಕೆ ಸೇರಿದ್ದೀರಿ. ನಾವು ತ್ರಿಶಂಕು ಸ್ವರ್ಗದಲ್ಲಿದ್ದೇವೆ. ಸ್ವರ್ಗಕ್ಕೆ ಸೇರಿರುವ ಬನ್ನಿಕೋಡ್‌ರವರಿಗೆ ಸ್ವರ್ಗದಲ್ಲಿ ಸಿಗತಕ್ಕಂಥ ಎಲ್ಲ ಸವಲತ್ತುಗಳನ್ನೂ ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಲ್ಪಿಸಿಕೊಡಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್ : ನಿಮ್ಮ ಸರ್ಕಾರದಲ್ಲಿ ನೀವೇನು ಮಾಡಿದಿರೋ ಹಾಗೆಯೇ ಈ ಸರ್ಕಾರ ಕೂಡ ಮಾಡುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯಾರವರೆ, ನಾವು ಮತ್ತು ನೀವು ಬಿ. ಎ. ಸಿ. ಮೀಟಿಂಗ್‌ನಲ್ಲಿ ಸೇರಿಯೇ 5ನೇ ತಾರೀಖಿನವರೆಗೂ ಸದನವನ್ನು ನಡೆಸಲು ತೀರ್ಮಾನ ಮಾಡಿ ಅಷ್ಟರೊಳಗೆ ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆ ಮಾಡಿ ಮುಗಿಸಬೇಕೆಂದೇ ತೀರ್ಮಾನವನ್ನು ಮಾಡಿದ್ದೇವೆ. ಅದನ್ನು ತಾವು ಕೂಡ ಈಗ ಒಪ್ಪುತ್ತೀರಿ. ಜೂನ್ ತಿಂಗಳಿನಲ್ಲಿಯೇ ಚುನಾವಣೆ ನಡೆಯುತ್ತದೆಂದು ನಮಗೂ ಮತ್ತು ನಿಮಗೂ ಮೊದಲೇ ಗೊತ್ತಿತ್ತು. ಇದೇನು ಹೊಸ ವಿಷಯವೇನಲ್ಲ. ಹೀಗಿರುವಾಗ ಜೂನ್‌ನಲ್ಲಿ ಚುನಾವಣೆಯಾಗುತ್ತದೆ ಎಂದರೂ ಇವೊತ್ತು ಕೂಡ ನಾವು ಅದೇ ಪೊಜಿಷನ್‌ನಲ್ಲಿದ್ದೇವೆ. ನಾಲ್ಕು ದಿವಸಗಳ ವ್ಯತ್ಯಾಸ ಮಾತ್ರ ಆಗಿದೆ. ಈ ನಾಲ್ಕು ದಿವಸದಲ್ಲಿ ಏನು ಬದಲಾವಣೆಯಾಯಿತೋ ನನಗಂತೂ ಗೊತ್ತಾಗಲಿಲ್ಲ. ನೀವು ಮತ್ತು ನಾವು ಮಾಡಿದ ತೀರ್ಮಾನಕ್ಕೂ ನಾವು ಬದ್ಧರಾಗದಿದ್ದರೆ ಸದನವನ್ನು ಹೇಗೆ ನಡೆಸುವುದು?

ಶ್ರೀ ಪಿ. ಜಿ. ಆರ್ ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮಾತನಾಡುತ್ತಾ ಒಂದು ವಿಚಾರವನ್ನು ಹೇಳಿದ್ದಾರೆ, ಏನೆಂದರೆ ನಡೆದಿರುವ 26 ದಿನಗಳ ಸದನ ಕಲಾಪದಲ್ಲಿ ಬೇರೆ ಬೇರೆ ವಿಚಾರಗಳ ಪೈಕಿಯೇ ಇವರು ಮಾತನಾಡಿದರು ಎಂದು ಹೇಳಿದ್ದಾರಲ್ಲದೇ ಶೂನ್ಯ ವೇಳೆಯಲ್ಲಿ ಎತ್ತಿದ ವಿಚಾರಗಳಿಗೆ ಹೆಚ್ಚು ಒತ್ತನ್ನು ಕೊಟ್ಟರು ಎಂದು ಹೇಳಿದ್ದಾರೆ. ಈಗ ಕಂಬಾಲಪಲ್ಲಿಯಲ್ಲಿ ಹರಿಜನರ ಹತ್ಯೆಯಾಯಿತು. ಅದಕ್ಕೆ ಎಸ್. ಎಂ. ಕೃಷ್ಣರವರೇ ಕಾರಣಕರ್ತರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಹಾಗಾಗಿದೆ. ಆ ರೀತಿಯಾದಾಗ ನಾವು ಬಾಯಿ ಮುಚ್ಚಿಕೊಂಡು ಕುಳುತಿರಬೇಕೇ? ಮಾನ್ಯ ವಸಂತ್ ಅಸ್ನೋಟಿಕರ್ ಕೂಲೋಯಾಯಿತು. ಆಗಲೂ ನಾವು ಬಾಯಿ ಮುಚ್ಚಿಕೊಂಡು ಕುಳಿತಿಕಬೇಕೇ? ಸದನದ ವೇಳೆಯನ್ನು ಬೇರೆಯದಕ್ಕೆ ಉಪಯೋಗಿಸಿದ್ದಾರೆ ಎಂದು ಹೇಳಿರುವ ಅವರ ಮಾತನ್ನು ನಾನು ಒಪ್ಪುವುದಿಲ್ಲ. ಚುನಾವಣೆ ತಾರೀಖಿನ್ನು ಹತ್ತನೇ ತಾರೀಖು ಘೋಷಣೆ ಮಾಡಬಹುದು, ಅದುದರಿಂದ ಇನ್ನೂ ಐದು ದಿನಗಳು ಸಿಗಬಹುದು ಎನ್ನುವ ಕಾರಣದಿಂದ ಐದನೇ ತಾರೀಖಿನೊಳಗೆ ಬೇಡಿಕೆಯ ಬಗ್ಗೆ ಚರ್ಚೆ ಮುಗಿಸಬಹುದು ಎಂದು ನಾವು ಒಪ್ಪಿಗೆಯನ್ನು ಕೊಟ್ಟಿದ್ದೆವು. ಆದರೆ ಈಗ ನಿಮ್ಮ ಮಾತಿನ ಮೇಲೆ ನಮಗೆ ಭರವಸೆ ಇಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಮಾತನಾಡುತ್ತಾ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ಮೀಸಲಾತಿ ವಿಚಾರದಲ್ಲಿ ಏನೇನು ವ್ಯತ್ಯಾಸಗಳಾಗಿವೆಯೋ ಅದರ ಬಗ್ಗೆ ವಿವರ

ಕೊಡಿ, ನಾನು ಪರಿಶೀಲನೆ ಮಾಡುತ್ತೇನೆ ಎಂದು ಅತ್ಯಂತ ಪ್ರಾಮಾಣಿಕವಾಗಿ ಹೇಳಿದ್ದಾರೆ. ನಾವು ವಿವರ ಕಡುವ ಮುಂಚೆಯೇ ಅವೆಲ್ಲಾ ಗೆಜೆಟ್‌ನಲ್ಲಿ ಪಬ್ಲಿಷ್ ಆಗಿಬಿಟ್ಟಿವೆ. ಹೀಗಾಗಿರುವಾಗ ಇನ್ನು ತಿದ್ದುಪಡಿ ಮಾಡುವ ಪ್ರಶ್ನೆ ಎಲ್ಲಿ ಬರುತ್ತದೆ? ಇವರು ಇನ್ನು ಮೂರು ದಿನ ಸದನವನ್ನು ನಡೆಸಿ ಇವರಿಗೆ ಅನುಕೂಲವಾಗುವ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯ ಕಾರ್ಯಕ್ರಮಗಳನ್ನು ಘೋಷಣೆ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಹೇಳಿದರೆ ಅದರಲ್ಲಿ ತಪ್ಪೇನಿದೆ? ನನಗೆ ಅದೇ ಅರ್ಥವಾಗುತ್ತಿಲ್ಲ. ಇದನ್ನು ಸದುದ್ದೇಶ ಎಂದು ಹೇಗೆ ಹೇಳುವುದಕ್ಕಾಗುತ್ತದೆ? ಇದರಲ್ಲಿ ದುರುದ್ದೇಶವಿದೆ. ಅದಕ್ಕೋಸ್ಕರ ನಾವು ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಈಗಲೂ ಕಾಲ ಮಿಂಚಿಲ್ಲ. ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುತ್ತೇನೆ. ಏಕೆಂದರೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಸೌಹಾರ್ದಯುತವಾದ ವಾತಾವರಣ ವಿರಬೇಕಾದುದು ಅವಶ್ಯಕವಿರುತ್ತದೆ. ಬಿ.ಜೆ.ಪಿ. ಯವರು ಕೂಡ ಮತ್ತೆ ಸದನಕ್ಕೆ ವಾಪಸ್ ಬರಬಹುದು. ಆದುದರಿಂದ ಇಂದು ಸದನವನ್ನು ಮುಂದೂಡಿ ಮತ್ತೆ ಜೂನ್ 11ನೇ ತಾರೀಖು ಅಥವಾ 12ನೇ ತಾರೀಖಿಗೆ ಸೇರಿದರೆ ಒಳ್ಳೆಯದು. ಏನೂ ಆಗುವುದಿಲ್ಲ, ನಾವೂ ಕೂಡ ಹಿಂದೆ ಹನ್ನೆರಡು ವರ್ಷಗಳ ಕಾಲ ಸರ್ಕಾರವನ್ನು ನಡೆಸಿದ್ದೇವೆ. ಓಟ್-ಆನ್-ಅಕೌಂಟ್‌ನಲ್ಲಿಯೇ ನಾವು ಅಪ್ರೋಪ್ರಿಯೇಷನ್ ಬಿಲ್‌ನ್ನು ಮಾರ್ಚ್ 31ರಲ್ಲಿಯೇ ಪಾಸ್ ಮಾಡಿಕೊಟ್ಟಿದ್ದೇವೆ. ಜುಲೈ ಕಡೆಯವರೆಗೂ ಖರ್ಚು ಮಾಡಬಹುದು. ಜೂನ್‌ನಲ್ಲಿ ಹದಿನೈದು ದಿನಗಳ ಕಾಲ ಅಧಿವೇಶನ ಕರೆದು ಚರ್ಚೆ ಮಾಡಿದರೆ ತಪ್ಪೇನಾಗುತ್ತದೆ? ಈಗಾಗಲೇ ನಿಮಗೇಕೆ ಅವಸರ ಎನ್ನುವುದೇ ನಮಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಅದಕ್ಕೆ ನಿಮ್ಮಿಂದ ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಅವಸರ ಯಾರದ್ದೂ ಇಲ್ಲ. ಅವಸರ ಇದ್ದಿದ್ದರೆ 5ನೇ ತಾರೀಖಿನವರೆಗೂ ಸದನ ಮುಂದುವರೆಸಬೇಕು ಎಂದಾಗಲೇ ಸರ್ಕಾರ ಅದಕ್ಕೆ ಒಪ್ಪದೇ ಇರಬಹುದಾಗಿತ್ತು. ಆದರೆ ವಿರೋಧ ಪಕ್ಷದವರು ಕೊಟ್ಟ ಸಲಹೆಗಳನ್ನೆ ಸರ್ಕಾರ ಒಪ್ಪಿಕೊಂಡೇ ಬಂದಿದೆ. ಈಗ ಅವಸರದ ಪ್ರಶ್ನೆಯೆಂದರೆ ಯಾವ ಕಾರಣಕ್ಕಾಗಿ ಅಧಿವೇಶನವನ್ನು ಕರೆಯಲಾಯಿತೋ ಆ ಕಾರಣ ಪೂರ್ಣವಾಗುವವರೆಗೆ ನಮ್ಮ ಜವಾಬ್ದಾರಿ ಇದೆ. ಕಾರಣವೇನು? ಈ ಆಯವ್ಯಯ. 28ನೇ ತಾರೀಖಿನಿಂದ 5ನೇ ತಾರೀಖಿಗೆ ಸದನವನ್ನು ಮುಂದುವರಿಸಿಕೊಂಡೇ ಹೋಗಲು ತೀರ್ಮಾನ ಮಾಡುವಾಗಲೂ ನಾನು ಒಂದು ಮಾತನ್ನು ಹೇಳಿದ್ದೆ. 29ನೇ ತಾರೀಖು ನೀತಿ ಸಂಹಿತೆ ಜಾರಿಗೆ ಬಂದಿದೆ. ಆಯವ್ಯಯದ ಅಧಿವೇಶನ ಕರೆದದ್ದು ಅರ್ಥಪೂರ್ಣವಾಗಬೇಕೆಂದರೆ ಆಯವ್ಯಯ ಮಂಜೂರಾಗಬೇಕು. ಅದು ಆಗದಿದ್ದರೆ ಹೇಗೆ? ಇದು ಒಂದು ಭಾಗ. ಇದನ್ನು ಎರಡನೆಯ ಅಂಶವೆಂದರೆ ನಾಲ್ಕು ತಿಂಗಳಿಗೆ ಓಟ್-ಆನ್-ಅಕೌಂಟ್ ಕೊಟ್ಟಿರುವುದರಿಂದ ನಿಮಗೆ ಯಾವ ಬಾಧಕವು ಆಗುವುದಿಲ್ಲವೆಂದು ಅವರು ಹೇಳಿದ್ದಾರೆ. ಖಂಡಿತ ಬಾಧಕ ಆಗುವುದಿಲ್ಲ. ನಾನು ಶಾಸನ ಸಭೆಯ ಸದಸ್ಯನಾದ ದಿವಸದಿಂದ ಇದೇ ಮಾತನ್ನು ಹೇಳುತ್ತಿದ್ದೇನೆ. ಅದಷ್ಟು ಮಾರ್ಚ್ 31 ರೊಳಗೆ ಅಧಿವೇಶನವನ್ನು ಮುಗಿಸಿಕೊಂಡರೆ ಅಲ್ಲಿಂದ ಮುಂದೆ ಸುಮಾರು ಎರಡು ತಿಂಗಳುಗಳ ಕಾಲ ಬಜೆಟ್ ಅಲೋಕೇಶನ್‌ಗೆ ಸಮಯ ಹೋಗುತ್ತದೆ. ಆಮೇಲೆ ಕಾರ್ಯಕ್ರಮವನ್ನು ಸರಿಯಾಗಿ ಪ್ರಾರಂಭ ಮಾಡುವಾಗ ನಾವು ಆಗಸ್ಟ್‌ನಲ್ಲೋ ಸೆಪ್ಟೆಂಬರ್‌ನಲ್ಲೋ ಬಜೆಟ್ ಅಧಿವೇಶನವನ್ನು ಮುಗುಸಿದರೆ ಜನವರಿಯಿಂದ ತಾರತುರಿ ಟೇಕ್-ಆಫ್, ತರಾತುರಿ,

ಯಾವುದಕ್ಕೆ ಎಷ್ಟು ಹಣ, ಯಾವ ಯಾವ ಇಲಾಖೆಯಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ಸರಿಯಾದ ಲೆಕ್ಕ ಸಿಗುವುದೇ ಇಲ್ಲ. ಅಷ್ಟು ಹೊತ್ತಿಗೆ ಮತ್ತೊಂದು ಬಜೆಟ್ ಅಧಿವೇಶನ ಬಂದುಬಿಡುತ್ತದೆ. ಹೀಗಾಗಬಾರದು ಎಂದೇ ನಿರ್ದಿಷ್ಟವಾದ ಕಾಲದಲ್ಲಿ ಆಯಾಯ ಕಾಲಕ್ಕೆ ತಕ್ಕಂತೆ ಆ ಆಯವ್ಯಯಗಳು ಮಂಡನೆಯಾಗಿ ಅವು ಮಸೂದೆಯಾಗಿ ಪಾಸ್ ಆದರೆ ಕೆಲಸ ಮಾಡುವುದಕ್ಕೆ ಅಧಿಕಾರಿಗಳಿಗೂ ಅನೂಕೂಲ ಮತ್ತು ಶಾಸನ ಸಭೆಯ ಸದಸ್ಯರಿಗೂ ಅನುಕೂಲ ಮತ್ತು ಪತ್ರಿಕೆಯವರಿಗೂ ಕೂಡ ಅನುಕೂಲ ಆಗುತ್ತದೆ. ಶಾಸನ ಸಭೆಯಲ್ಲಿ ನಡೆಯುವ ವಿಷಯಗಳನ್ನು ವರದಿ ಮಾಡುವ ವರದಿಗಾರರಿಗೂ ಕೂಡ ನಿಜವಾದಂಥ ಅರ್ಥದಲ್ಲಿ ಆಯವ್ಯಯ ಅಧಿವೇಶನ ಸೇರಿದ ಅಧಿವೇಶನವನ್ನು ಬಿಟ್ಟು ಮುಂದೆ ಹೋಗುವುದು ಸದನಕ್ಕೂ ಗೌರವವಲ್ಲ ಮತ್ತು ಯಾವ ಉದ್ದೇಶಕ್ಕಾಗಿ ಅಧಿವೇಶನವನ್ನು ಕರೆಯಲಾಗಿತ್ತೋ ಅದಕ್ಕೆ ನಿಜವಾದ ನ್ಯಾಯವನ್ನು ಒದಗಿಸಿದ ಹಾಗೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

+ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, 1998-99ನೇ ಸಾಲಿನಲ್ಲಿ ಬಜೆಟ್ ಅಧಿವೇಶನ ಕರೆದಾಗ ಯಾವುದೇ ಚುನಾವಣೆಗಳನ್ನು ನಡೆಸಬಹುದಾದ ಸನ್ನಿವೇಶ ಇರಲಿಲ್ಲ. ಅಂದರೆ ನಾರ್ಮಲ್ ಇಯರ್ ಆಗಿತ್ತು. ಬಜೆಟ್ ಸೆಶನ್ ನಡೆದದ್ದು ಹನ್ನೆರಡು ದಿವಸ, ಇಷ್ಟರೊಳಗೆ ಬೇಡಿಕೆಗಳ ಮೇಲೆ ಚರ್ಚೆ ಆಗಿದೆ. ಒಟ್ಟಾರೆ ನಡೆದ 18 ದಿವಸದ ಸದನದಲ್ಲಿ ಆರು ದಿವಸ ಬೇರೆ ಬೇರೆ ಪ್ರಸ್ತಾಪಗಳ ಮೇಲೆ ಚರ್ಚೆಯಾಗಿ ಅದರಲ್ಲಿ ಎಂಟು ದಿವಸ ಬಜೆಟ್ ಮೇಲೆ ನಡೆಯಿತು. ಕೆಲವು ವರ್ಷಗಳಲ್ಲಿ ಮಾತ್ರ ಫುಲ್ ಬಜೆಟ್ ನಡೆದಿರುವುದನ್ನು ಬಿಟ್ಟರೆ ಸರ್ವೇ ಸಾಧಾರಣವಾಗಿ ಓಟ್-ಆನ್- ಅಕೌಂಟ್ ಮಾಡಿದ್ದೇವೆ. 1984ರಲ್ಲಿ, 1986-87ರಲ್ಲಿ 1992-93ರಲ್ಲಿ, 1993-94ರಲ್ಲಿ, ಫುಲ್ ಬಜೆಟ್ ನ್ನು ಮಾಡಲಾಗಿದೆ. ಕೇಂದ್ರದಲ್ಲೂ ಕೂಡ ಲೋಕಸಭೆಯಲ್ಲಿ ಆಟೋಮ್ಯಾಟಿಕಲಿ ಓಟ್-ಆನ್- ಅಕೌಂಟ್ ಪಾಸ್ ಆಗುತ್ತದೆ. ಆ ಮೇಲೆ ಡಿಸ್‌ಕಷನ್ ನಡೆಯುತ್ತದೆ. ಆದುದರಿಂದ ಇಲ್ಲಿ ಪ್ರತಿಷ್ಠೆ ಮೇಲೆ ನಿಲ್ಲತಕ್ಕಂಥ ಅವಶ್ಯಕದತೆ ಸರ್ಕಾರಕ್ಕೆ ಏನಿಲ್ಲ. ಮಿಕ್ಕ ರಾಜಕೀಯ ಪಕ್ಷಗಳದ್ದು, ಯಾರ್ಯಾರ ತುರ್ತು ಏನು ಎನ್ನುವುದನ್ನು ನಾವು ಸರ್ಚ್‌ಲೈಟ್ ಹಾಕಿ ನೋಡುವುದಕ್ಕೆ ಆಗುವುದಿಲ್ಲ. ಅವರ ಬಾಯಿಯಿಂದ ಏನು ಬರುತ್ತದೆ ಅದರಿಂದಲೇ ಎಲ್ಲಾ ಗೊತ್ತಾಗುತ್ತದೆ. ಭಾಗವತಾರ್ ರಾಮನವಮಿಯಲ್ಲಿ ಸಂಗೀತ ಸಭಾ ಮಾಡುವಾಗ ಆ ಎಂದಾಗ ಅವರು ಯಾವ ರಾಗ ಹಾಡುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಇವತ್ತು ಬೆಳಿಗ್ಗೆಯಿಂದಲೇ ನಮ್ಮ ಪ್ರಧಾನ ವಿರೋಧಪಕ್ಷದವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ನಮಗೇನು ಅನುಮಾನ ಇತ್ತು ಅದನ್ನು ಸಾಬೀತು ಪಡಿಸುವ ರೀತಿಯಲ್ಲಿ ಸಭೆಯನ್ನು ನಿಷೇಧ ಮಾಡಬೇಕೆಂದು ವ್ಯಕ್ತ ಮಾಡುತ್ತಿದ್ದು, ಅವರನ್ನು ಜನ ಏನು ಆರಿಸಿ ಕಳುಹಿಸಿ ನೀವು ಹೋಗಿ ವಿಧಾನಸಭೆಯಲ್ಲಿ ಕುಳಿತು ಸರ್ಕಾರವನ್ನು ಟೀಕೆ ಮಾಡಿ ಅದನ್ನು ತಿದ್ದಿ ಸರ್ಕಾರಕ್ಕೆ ಮಾರ್ಗದರ್ಶನ ಮಾಡಿ ಎಂದು ಮ್ಯಾಂಡೇಟ್ ಕೊಟ್ಟಿದ್ದರೂ. ಅದನ್ನು ಬಿಟ್ಟು ಬಿಟ್ಟು ನೀವು ನಿಷೇಧ ಮಾಡಿ ಹೋಗಿ ಎನ್ನುವುದಕ್ಕೆ ಅಲ್ಲ. ತಮ್ಮಲ್ಲಿ ನಾವು ಎಷ್ಟೋ ಹೇಳಿಕೊಂಡಿದ್ದೇವೆ. ಡಿಮ್ಯಾಂಡ್ಸ್ ಮೇಲೆ ಚರ್ಚೆಯಾಗಬೇಕು ಮತ್ತು ಈ ಸರ್ಕಾರದ ಪರವಾಗಿ ಈಗಾಗಲೇ ಸಂಸದೀಯ ವ್ಯವಹಾರಗಳ ಸಚಿವರು ಕನಿಷ್ಟ ನೂರು ದಿವಸಗಳ ಕಾಲ ಸದನವನ್ನು ನಡೆಸಬೇಕು ಎನ್ನುವ ವಿಚಾರವನ್ನು ಈಗಾಗಲೇ ಇಟ್ಟಿದ್ದಾರೆ. ಆದುದರಿಂದ ಆ ನೂರು ದಿವಸದ ಗಡಿಯನ್ನು ನಾವು ತಲುಪಬೇಕೆನ್ನುವ ದೃಷ್ಟಿಯಿಂದ ಸದನ 28ನೇತಾರೀಖು ಮುಕ್ತಾಯಗೊಳ್ಳಬೇಕಾಗಿತ್ತು ನಮ್ಮ ಮೊದಲನೆ ಕ್ಯಾಲೆಂಡರ್ ಪ್ರಕಾರ ಆದರೆ ನಂತರ ತಮ್ಮಗಳ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿ ನಾವು ಇನ್ನು

5ನೇ ತಾರೀಖಿನವರೆಗೂ ಕುಳಿತುಕೊಳ್ಳಬೇಕು ಎಂದು ಮಾಡಿದೆವು. ಆದರೆ ನಾವು ಈ ಚುನಾವಣೆಗಳನ್ನು ಜೂನ್ ತಿಂಗಳಲೇ ನಿರೀಕ್ಷೆ ಮಾಡಿದ್ದು, ಅದರ ಬಗ್ಗೆ ಹೇಳುತ್ತಲೇ ಇದ್ದೆವು. ಆದರೆ ನಿಮಗೆ ಇವರೇನು ಚುನಾವಣೆ ಮಾಡುತ್ತಾರೆಂದು ಅನುಮಾನ ಇದ್ದೇ ಇತ್ತು. ಆದರೆ ನಿಮ್ಮ ಅನುಮಾನವನ್ನು ಇಲ್ಲದಂತೆ ಮಾಡಿಸಿದೆವು. ಈಗಾಗಲೇ ಒಂದು ಚುನಾವಣೆಯನ್ನು ಮಾಡಿದೆವು. ಏಕೆಂದರೆ ಮಂತ್ರಿಮಂಡಲದಲ್ಲಿ ಬಹಳ ದೊಡ್ಡ ಗಲಾಟೆ ಇತ್ತು. ಒಹಳ ಭಿನ್ನಾಭಿಪ್ರಾಯ ಇತ್ತು. ಮಾನ್ಯ ಫೋರ್ಡ್‌ಡೆಯವರಿಗೆ ಚುನಾವಣೆ ಮಾಡಬೇಕೆಂದು ಇತ್ತು. ಆದರೆ ಬೇರೆಯವರಿಗೆ ಚುನಾವಣೆ ಬೇಡವೇ ಬೇಡ ಎಂದು ಹೇಳುತ್ತಿದ್ದರು. ಆದುದರಿಂದ ಚುನಾವಣೆ ನಡೆಯುವುದಿಲ್ಲವೆಂದು ಸರ್ವೇಸಾಮಾನ್ಯವಾಗಿ ಅವರು ತಿಳಿದಿಕೊಂಡಿದ್ದರು. ಆದರೆ ಚುನಾವಣೆಗಳು ಬಂದೇಬಿಟ್ಟಿತು. ಆದರೆ ಯಾರಿಗೂ ಚುನಾವಣೆಯಾದುದರಿಂದ ತೊಂದರೆ ಆಗಲಿಲ್ಲ. ಇವತ್ತು ಡಿಮ್ಯಾಂಡ್ ಪ್ರಾರಂಭವಾಗಿದೆ. ಡಿಮ್ಯಾಂಡ್‌ಗಳ ಮೇಲೆ ಚರ್ಚೆ ಪ್ರಾರಂಭವಾಗಿ ಈಗ ಮಾನ್ಯ ಪಂಚಾಯತ್ ರಾಜ್ ಸಚಿವರು ಡಿಮ್ಯಾಂಡ್‌ಗೆ ಉತ್ತರ ಕೊಡಬೇಕಾಗಿತ್ತು, ಆದರೆ ಈಗಾಗಲೇ ಅವರು ನಡೆದಿರತಕ್ಕಂಥ ಚರ್ಚೆಗೆ ಉತ್ತರ ಕೊಡಲಿಲ್ಲ, ಏಕೆಂದರೆ ಬಹುಶಃ ಇನ್ನು ಮಾನ್ಯ ಭೈರೇಗೌಡರು ಮಾತನಾಡುವವರಿದ್ದಾರೆಂದು ಮಾನ್ಯ ಅಧ್ಯಕ್ಷರು ಹೇಳಿದರು. ಅವರು ಮಾತನಾಡಿದ ಮೇಲೆ ಸರ್ಕಾರದಿಂದ ಉತ್ತರ ಕೊಡಬೇಕು. ಈಗಾಗಲೇ ಚರ್ಚೆಯಾಗಿರತಕ್ಕಂಥ ಎಂಟು ಡಿಮ್ಯಾಂಡ್‌ಗಳಿಗೆ ಉತ್ತರವಾದ ಮೇಲೆ ಈ ಸದನವನ್ನು ಮುಂದಕ್ಕೆ ನಡೆಸಬೇಕೇ ಬೇಡವೇ ಎನ್ನುವುದರ ಬಗ್ಗೆ ನಾವು ನೀವು ಕುಳಿತು ತೀರ್ಮಾನ ಮಾಡೋಣ. ಮಾನ್ಯ ಸದಸ್ಯರು ಮಾತನಾಡಿ ಅನಂತರ ಉತ್ತರ ನೀಡಿದರೆ ಆಗ ಡಿಮ್ಯಾಂಡ್‌ಗೆ ಒಂದು ಸೀರಿಯಸ್‌ನೆಸ್ ಬರುತ್ತದೆ. ಒಂದು ಸ್ಯಾಂಕ್ಟಿಟಿ ಇರುತ್ತದೆ. ನೀವು ನಿಮ್ಮ ಸ್ನೇಹಿತರಿಗೆ ಹೇಳಿಕಳುಹಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಹೇಳಿದಹಾಗೆ ನಾವು ಚರ್ಚೆಗೆ ಅನಂತರವೂ ಸಿದ್ಧ ಇದ್ದೇವೆ. ಮೊದಲು ಎಂಟು ಡಿಮ್ಯಾಂಡ್ ಆದರೂ ಆಗಲಿ. ನೀವು ಹೇಳಿದ ಮಾತಿಗೆ ನಾವು ಒಪ್ಪಿಕೊಂಡ ಮೇಲೆ ನಾವು ಏನು ರಿಪ್ಲೈ ಕೊಡುತ್ತೇವೆಂದು ಕೇಳುವುದಕ್ಕೆ ತಾಳ್ಮೆನೂ ಇಲ್ಲ ಎಂದರೆ..

ಶ್ರೀ ಕಾಗೋಡು ತಿಮ್ಮಪ್ಪ : ಈಗಾಗಲೇ ಚರ್ಚೆ ಪೂರ್ಣವಾಗಿದೆ, ಉತ್ತರ ಕೊಡುವುದು ಮಾತ್ರ ಉಳಿದಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ತಾವು ಕೋಪ ಮಾಡಿಕೊಳ್ಳಬೇಡಿ, ಅನುಭವಸ್ಥರು, 62ರಿಂದ 70ರ ಅವಧಿಯಲ್ಲಿ ಇರುವವರು ಕೋಪ ಮಾಡಿಕೊಂಡರೆ ಹೇಗೆ? ಮಾನ್ಯ ಮುಖ್ಯ ಮಂತ್ರಿಯವರು ವ್ಯಂಗ್ಯವಾಗಿ ಮಾತನಾಡಿ ಚುಚ್ಚುವುದನ್ನು ನೋಡಿದರೆ ನಮಗೆ ಬಹಳ ಕಷ್ಟವಾಗುತ್ತದೆ. ಇನ್ನು ಆಡಳಿತ ಪಕ್ಷದವರಿಗೆ ಎಷ್ಟು ಕಷ್ಟವಾಗಿದೆಯೋ ನಮಗಂತೂ ಗೊತ್ತಿಲ್ಲ. ಅದು ಏನೇ ಇರಲಿ; ಸರ್ಕಾರದವರು, ನಾವು ಇದನ್ನು ಪ್ರತಿಷ್ಠೆಯನ್ನಾಗಿ ಮಾಡಿಕೊಳ್ಳುವುದಿಲ್ಲ, ನಾವು ನೂರು ದಿವಸಗಳ ಕಾಲ ನಡೆಸುತ್ತೇವೆ, ನಮಗೇನು ಅವಸರವಿಲ್ಲವೆಂದು ಹೇಳುವುದುನೈತಿಕ ಪ್ರಶ್ನೆ. This becomes a precedent. ನಾಳೆ ಎಲೆಕ್ಷನ್ ನಡೆಯುತ್ತಿದೆ, ನೀವು ಆಶ್ವಾಸನೆ ಕೊಟ್ಟುಕೊಂಡು ಅಥವಾ ಉತ್ತರಗಳನ್ನು ಕೊಡುತ್ತೇನೆಂದರೆ ಚುನಾವಣಾ ನೀತಿ ಸಂಹಿತೆಗೆ ಎಲ್ಲಿ ಅಡ್ಡ ಬರುತ್ತದೆ ಎನ್ನುವುದು ಈಗ ಇರುವ ಪ್ರಶ್ನೆ. ಆದರೂ ನೀವು ಮುಂದೂಡುವುದಕ್ಕೆ ಒಪ್ಪಿರುವುದರಿಂದ ಸದನವನ್ನು ಐದು ನಿಮಿಷ ಮುಂದೆ ಹಾಕಿ, ನಾನು ವಿರೋಧಪಕ್ಷದವರ ಜೊತೆಯಲ್ಲಿ ಮಾತನಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಿಂಧ್ಯರವರೆ, ಬೆಳಿಗ್ಗೆ ಸದನವನ್ನು 12. 30ಕ್ಕೆ ಮುಂದೆ ಹಾಕಿ ಮತ್ತೆ 5. 15ಕ್ಕೆ ಸೇರಿದೆ. ಈಗ ಎಷ್ಟು ಮುಂದೆ ಹಾಕಬೇಕು ಎಂದರೆ ಹೇಗೆ?

ಶ್ರೀ ಪಿ. ಜಿ. ಆರ್. ಸಿಂಧ್ಯ : ನೀವು ಐದು ನಿಮಿಷ ಮುಂದೆ ಹಾಕಿ.

ಶ್ರೀ ಕಾಗೋಡು ತಿಮ್ಮಪ್ಪ : ನೀವಿಬ್ಬರೆ ಮಾತನಾಡಿಕೊಂಡು ಬನ್ನಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಮುಖ್ಯಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ನಮ್ಮನ್ನೆಲ್ಲಾ XXX ನಾವು ಒಂದು ನಿಲುವು ತೆಗೆದುಕೊಂಡು ಒಂದು ನೀತಿ ಸಂಹಿತೆ ಎಂದು ಮಾಡಿದಾಗ ಆದರಲ್ಲಿ ಅವರು ನಮ್ಮನ್ನು ಇಷ್ಟು ಇಕ್ಕಟ್ಟಿಗೆ ಸಿಕ್ಕಿಸುತ್ತಾರೆ ಎಂದು ತಿಳಿದಿಕೊಂಡಿರಲಿಲ್ಲ. ಆದುದರಿಂದ ದಯವಿಟ್ಟು ತಾವು.....

ಅಧ್ಯಕ್ಷರು : ಮಾನ್ಯ ಸದಸ್ಯರು ಏನು ಜಾತಿ ಕೆಡಿಸುವ ಕೆಲಸ ಮಾಡುತ್ತಾರೆ. ಎನ್ನುವುದನ್ನು ಹೇಳಿದರು ಅದನ್ನು ಕಡತದಿಂದ ತೆಗೆದುಹಾಕಿ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದರಿಂದ ಅವರು ನೀವು ಒಂದಾಗಿ ಇರುವುದಕ್ಕೆ ಆಗುವುದಿಲ್ಲ ಎನ್ನುವುದನ್ನು ತೋರಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಒಂದು ಘಟ್ಟ ಬಂದು ತಲುಪಿದ ಮೇಲೆ ಈಗಲಾದರೂ ಅವರು ಕನ್ಸೀಡ್ ಮಾಡಬೇಕಲ್ಲ.

ಅಧ್ಯಕ್ಷರು : ಮಾನ್ಯ ಸಿಂಧ್ಯರವರೆ, ಬೆಳಿಗ್ಗೆ 12.00 ಗಂಟೆಗೆ ಸದನವನ್ನು ಮುಂದೂಡಿ ಮತ್ತೆ 5. 15ಕ್ಕೆ ಪ್ರಾರಂಭ ಮಾಡಿದ್ದೇವೆ. ಈಗ ಅವರು ಉತ್ತರ ಪ್ರಾರಂಭ ಮಾಡಲಿ. ನೀವು ಹೋಗಿ ಮಾತನಾಡಿಕೊಂಡು ಬನ್ನಿ. Once, again, I don't like to adjourn.

ಶ್ರೀ ಪಿ. ಜಿ. ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈಗ ಐದು ನಿಮಿಷ ಮಾತ್ರ ಮುಂದೆ ಹಾಕಿ. ಇಲ್ಲಿ ನೈತಿಕರೆ ಪ್ರಶ್ನೆ ಬರುತ್ತದೆ. ಏಕೆಂದರೆ ಚುನಾವಣೆ ನೀತಿ ಸಂಹಿತೆ ನಡೆಯತಕ್ಕಂಥ ಸಂದರ್ಭದಲ್ಲಿ ಭರವಸೆಗಳನ್ನು ಕೊಡಬಾರದು. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಪ್ರತಿಭಟನೆ ಮಾಡಿಕೊಂಡು ಹೊರಟಿರುವುದು, ಇದೇ ದೃಷ್ಟಿಯಿಂದ ಹೊರತು ಬೇರೆ ದೃಷ್ಟಿಯಿಂದ ಅಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಮತ್ತು ಸಭಾನಾಯಕರು ಮನಸ್ಸನ್ನು ಒಲಿಸಬಹುದು ಎನ್ನುವುದಕ್ಕೆ ಇದು ಒಂದು ಉದಾಹರಣೆಯ. ಏಕೆಂದರೆ ಅವರು ಸ್ವಲ್ಪ ಭಾಗ ಇದ್ದೊಂದು ಆಗಲಿ, ಇವತ್ತು ನಾಳೆ ನೋಡೋಣ, ಎಂದು ಪರಿಶೀಲನೆ ಮಾಡತಕ್ಕಂಥ ಭರವಸೆ ಕೊಟ್ಟಿದ್ದಾರೆ. ತಾವು ಸ್ವಲ್ಪ ಮನಸೊಲಿದು ಐದು ನಿಮಿಷ ಮುಂದೆ ಹಾಕಿ, ನಾವು ಅವರ ಜೊತೆಯಲ್ಲಿ ಮಾತನಾಡಿ ಬರುತ್ತೇವೆ.

ಅಧ್ಯಕ್ಷರು : ನೀವೇ ಹೋಗಿ ಮಾತನಾಡಿಕೊಂಡು ಬನ್ನಿ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಐದು ನಿಮಿಷ ಮುಂದೆ ಹಾಕಿ ನಾವೆಲ್ಲಾ ಬರುತ್ತೇವೆ.

ಅಧ್ಯಕ್ಷರು : ಇಲ್ಲ, 12.00 ಗಂಟೆಯಲ್ಲಿ ನಾನು ಮುಂದೆ ಹಾಕಿದ್ದು ಅರ್ಧ ಗಂಟೆ ಮಾತ್ರ ಎಂದು. ಮತ್ತೆ ಸದನ ಸೇರಿದಾಗ 5. 30 ಗಂಟೆ ಆಗಿದೆ. ಹೇಗೆ ಹೇಳುತ್ತೀರಾ?

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಐದು ನಿಮಿಷ ಮಾತ್ರ ಮುಂದೆ ಹಾಕಿ. ಇದುಸತ್ ಸಂಪ್ರದಾಯ. ಸಭಾನಾಯಕರು ಒಪ್ಪಿದ್ದಾರೆ. I appreciate I really appreciate. this will give a very good, clear direction that here is a Chief Minister Who is yielding at this stage

ಅಧ್ಯಕ್ಷರು : ಅವರಿಂದ ಪಾಸಿಟೀವ್ ರಿಪ್ಲೈ ತರುತ್ತೀರಾ? ಈಗ ಸದನವನ್ನು ಮುಂದೂಡಿ ಮತ್ತೆ 5. 30ಕ್ಕೆ ಪುನಃ ಸೇರುತ್ತದೆ.

(ಸದನವು 5 ಗಂಟೆ 18 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ 5. 30ಕ್ಕೆ ಸೇರಲು ನಿಶ್ಚಯಿಸಿತು)

(ಸದನವು 5 ಗಂಟೆ 52 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು).

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನೈತಿಕತೆಯ ಪ್ರಶ್ನೆ ಇದೆ. ಚುನಾವಣಾ ಆಯೋಗದ ನೀತಿ ಸಂಹಿತೆಗಳು ಇರುವ ಸಂದರ್ಭದಲ್ಲಿ ಇವರು ಮಾಡತಕ್ಕಂಥ ಘೋಷಣೆಗಳು ಸರಿಯೇ ಎನ್ನುವ ಪ್ರಶ್ನೆ ಇದೆ. ನಮ್ಮ ಜೊತೆಯಲ್ಲಿರುವ ಪ್ರಮುಖ ವಿರೋಧ ಪಕ್ಷದವರು ಹೊರಗಡೆ ಇರುವಾಗ ತಾವು ಸದನ ನಡೆಸಿದಲ್ಲಿ ನಾವು ಭಾಗವಹಿಸುವುಗು ಅಷ್ಟೊಂದು ಸೂಕ್ತವಾಗಿ ಕಾಣುವುದಿಲ್ಲ. ಆದ್ದರಿಂದ, ನಾವು ಹೊರಗಡೆಯಿರುವ ವಿರೋಧ ಪಕ್ಷದವರ ಜೊತೆಯಲ್ಲಿ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ತಮಗೀಗಾಗಲೇ ಮಾನ್ಯ ಸಭಾನಾಯಕರು ಹೇಳಿದ್ದಾರೆ. ಇದುವರೆವಿಗೂ ಚರ್ಚೆಯಾಗಿರತಕ್ಕ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ನಾಳೆ ಬೆಳಿಗ್ಗೆ ಉತ್ತರ ಕೊಡಬಹುದು. ಅವರು ಅಲ್ಲಿಯವರೆವಿಗೂ ಅಲೋಚನೆ ಮಾಡುವುದಕ್ಕೆ ಟೈಮ್ ಬೇಕು ಎಂದು ಕೇಳುತ್ತಿರುವುದರಿಂದ ತಾವು ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 10 ಗಂಟೆಗೆ ಪುನಃ ಸೇರೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಬಿ.ಜೆ.ಪಿ. ಜನತಾದಳ (ಸಂ) ಹಾಗೂ ಜನತಾದಳ (ಜಾ) ನಾವು ಏನು ಹೇಳಿದ್ದೇವೆ ಅದನ್ನು ಅವರು ಪರಿಶೀಲನೆ ಮಾಡುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ತಾವು ಸದನವನ್ನು ಮುಂದೂಡಿ ನಾಳೆ ಸಭೆ ಸೇರಿದ ಮೇಲೆ ನೋಡೋಣ. ಏಕೆಂದರೆ, ಚುನಾವಣೆ ಅನೌನ್ಸ್ ಆದ ಮೇಲೆ ನೀತಿ ಸಂಹಿತೆಗಳು ಜಾರಿಯಾದ ಮೇಲೆ ಇಲ್ಲಿ ಉತ್ತರ ಕೊಡತಕ್ಕಂಥಾದ್ದು ಸರಿಯಲ್ಲ ಎನ್ನುವುದು ನಮ್ಮ ಅಭಿಪ್ರಾಯ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 10- 30ಕ್ಕೆ ಸೇರುತ್ತದೆ.

(ಸದನವು ಸಂಜೆ ಐದು ಗಂಟೆ ಐವತ್ನಾಲ್ಕು ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 3ನೇ ಮೇ ಮಾಹೆ ಎರಡು ಸಾವಿರ ಇಸವಿಯ ಬುಧವಾರದಂದು ಬೆಳಿಗ್ಗೆ 10- 30ಕ್ಕೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)